ಅಭಿನಂದನಾ ಭಾಷಣಗಳು

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು).—

ಮಾನ್ಯ ಸಭಾಧ್ಯಕ್ಷರೇ ಕರ್ನಾಟಕ ವಿಧಾನ ಸಭೆಯ ಸಭಾಪತಿಗಳಾಗಿ ತಾವು ಸರ್ವಾನುಮತದಿಂದ ಆಯ್ಕೆ ಹೊಂದಿದ ಬಗ್ಗೆ ನಾನು ಅತ್ಯಂತ ಹಾರ್ದಿಕವಾಗಿ. ಇಡಿ ಸಭೆಯ ಪರವಾಗಿ ಆ ಕಡೆ, ಈ ಕಡೆ ಕುಳಿತಿರತಕ್ಕಂಥ ಎಲ್ಲ ಮಾನ್ಯ ಸದಸ್ಯರ ಪರವಾಗಿ, ವೈಯಕ್ತಿಕವಾಗಿ ನನ್ನ ಪರವಾಗಿ ಅಭಿನಂದಿಸಲಿಕ್ಕೆ ಬಯಸುತ್ತೇನೆ. ಈಗ ತಾವು ಕುಳಿತಿರತಕ್ಕಂಥ ಆಸನ, ಹೂವಿನ ಆಸನವಲ್ಲ ಎನ್ನುವುದು ನನಗೂ ಗೊತ್ತಿರುತ್ತದೆ. ಅದರಂತೆ ತಮಗೂ ಗೊತ್ತಿರುತ್ತದೆ. ಒಂದು ಗುರುತರವಾದ ಹೊಣೆ ಇಂದು ನಿಮ್ಮ ಮೇಲೆ ಬಿದ್ದಿದೆ. ಶಾಸನಕ್ಕೆ ಸಂಬಂಧಪಟ್ಟಂತೆ ವಿಷಯಗಳು ಬಂದಾಗ, ಉದ್ಭವವಾಗತಕ್ಕಂಥ ವಿವಾದಗಳನ್ನು ತಾವು ಅತ್ಯಂತ ಉಜ್ವಲತೆಯಿಂದ ಬಿಡಿಸಬೇಕಾಗುತ್ತದೆ. ಅದನ್ನು ತಾವು ಯಶಸ್ವಿಯಾಗಿ ನಿರ್ವಹಿಸುತ್ತೀರೆಂದು ನನಗೂ ಮತ್ತು ಎಲ್ಲ ಸದಸ್ಯರಿಗೂ ಸಂಪೂರ್ಣವಾದ ವಿಶ್ವಾಸವಿದೆ. ಎಂಥ ಜಟಿಲ ಪ್ರಶ್ನೆ ಬರಲಿ, ಎಂಥ ಕಠಿಣವಾದ ಸಮಸ್ಯೆ ಉದ್ಭವವಾಗಲಿ, ಅದನ್ನು ಸುಲಲಿತವಾಗಿ ಬಿಡಿಸತಕ್ಕಂಥ ಅರ್ಹತೆಯನ್ನು ತಾವು ಪಡೆದಿದ್ದೀರಿ. ಕೇವಲ ಶೈಕ್ಷಣಿಕವಾಗಿ ಅಷ್ಟೇ ಅಲ್ಲ. ನಿಮಗೆ ಅನುಭವದ ಅರ್ಹತೆಯೂ ಇದೆ. ತಾವು ಪಾರ್ಲಿಮೆಂಟರಿ ನಡವಳಿಕೆಯನ್ನು ನಡೆಸಲು ಹೊಸಬರೇನು ಅಲ್ಲ. ಶಾಸಕರಾಗಿ, ಸಭೆಯ ಸದಸ್ಯರಾಗಿ, ವಿಧಾನ ಪರಿಷತ್ತಿನ ಸದಸ್ಯರಾಗಿ, ಪಾರ್ಲಿಮೆಂಟಿನ ಸದಸ್ಯರಾಗಿ ತಮಗೆ ಅನುಭವ ಸಿಕ್ಕಿದೆ. ಕೇವಲ ಸದಸ್ಯರಾಗಿ ಮಾತ್ರವೇ ಅಲ್ಲ. ತಾವು ಮಂತ್ರಿಗಳಾಗಿಯೂ ಕೆಲಸ ಮಾಡಿದ್ದೀರಿ. ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ಮಾಡಿದ್ದೀರಿ. ಸದನದ ಎರಡೂ ಕಡೆಗಳಲ್ಲಿಯೂ ಕುಳಿತು ತಾವು ಕೆಲಸ ಮಾಡಿದ್ದೀರಿ. ಈ ಅನುಭವ ಒಂದು ಅಪೂರ್ವವಾದದ್ದು, ತಮ್ಮಲ್ಲಿ ಬುದ್ಧಿವಂತಿಕೆ ಇದೆ. ಬಹಳ ತೀಕ್ಷ್ಣವಾಗಿ ವಿಷಯವನ್ನು ಗ್ರಹಿಸತಕ್ಕಂಥ ಶಕ್ತಿ ಇದೆ. ಹೀಗೆ ಅರ್ಹತೆಯ ದೃಷ್ಟಿಯಿಂದ ನನ್ನ ದೃಷ್ಟಿಯಲ್ಲಿ ಈ ಸ್ಥಾನವನ್ನು ಅಲಂಕರಿಸಲಿಕ್ಕೆ ಆದರ್ಶವಾದಂಥ ವ್ಯಕ್ತಿಯಾಗಿದ್ದೀರಿ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸಭಾಧ್ಯಕ್ಷರೇ ರಾಜಕೀಯವೆಂಬುದು ಒಂದು ಬುದ್ಧಿ ಮತ್ತು ಚತುರತೆಯ ವಾಗ್ವಾದದ ಒಂದು ರಂಗ. ಇಲ್ಲಿ ಸೇರತಕ್ಕಂಥದ್ದು ಕೇವಲ ಬುದ್ಧಿವಂತಿಕೆಯ ಪ್ರದರ್ಶನಕ್ಕಲ್ಲ. ಅಥವಾ ಚತುರತೆಯ ಪ್ರದರ್ಶನಕ್ಕಲ್ಲ. ಆದರೂ ಚರ್ಚೆಯ ಕಾಲದಲ್ಲಿ ಎರಡರ ಅವಶ್ಯಕತೆಯೂ ಇದೆ. ಕೆಲವು ಕ್ಲಿಷ್ಟ ಪರಿಸ್ಥಿತಿಯಲ್ಲಿ ಚರ್ಚೆ ವಿಕೋಪಕ್ಕೆ ಹೋಗತಕ್ಕಂಥ ಪರಿಸ್ಥಿತಿ ಬರಬಹುದು. ಅಂಥ ಸಂದರ್ಭಗಳಲ್ಲಿ ಉಷ್ಣತೆಯೂ ಕೂಡ ಬಹಳ ಮೇಲಕ್ಕೆ ಏರಬಹುದು. ಅಂಥ ಸಂದರ್ಭಗಳಲ್ಲಿ ತಾವು ಸಮಯೋಚಿತವಾಗಿ ಮತ್ತು ನಿಷ್ಪಕ್ಷಪಾತವಾಗಿ ಸಭೆಯ ಗಂಭೀರತೆಯನ್ನು, ಗೌರವವನ್ನು ಅದರ ಪ್ರತಿಷ್ಠತೆಯನ್ನು ಯೋಗ್ಯವಾದ ರೀತಿಯಲ್ಲಿ ಕಾಪಾಡುತ್ತೀರೆಂದು ನನಗೆ ನಂಬಿಕೆ ಇದೆ.

ಮಾನ್ಯ ಸಭಾಪತಿಗಳೇ, ಮಾನ್ಯ ವಿರೋಧ ಪಕ್ಷದ ನಾಯಕರು ಮೊದಲು ಪರಂಪರೆಯ ವಿಚಾರವಾಗಿ ಎರಡು ಮಾತುಗಳನ್ನು ಹೇಳಿದರು. ನಾನು ಅದನ್ನು ಒಪ್ಪುತ್ತೇನೆ, ಆದರೆ ಪರಂಪರೆಯ ನೆನಪು, ಬಹುಶಃ ವಿರೋಧಪಕ್ಷದಲ್ಲಿ ಇದ್ದಾಗ ಆಗುತ್ತದೆ. ಅದೇರೀತಿ ಮುಖ್ಯವಾಗಿ ಆ ಕಡೆ ಕುಳಿತಿರತಕ್ಕಂಥ ಸನ್ಮಾನ್ಯ ಮಿತ್ರರಿಗೆ ನಾನು ನೆನಪು ಮಾಡಿಕೊಡಲಿಕ್ಕೆ ಬಯಸುತ್ತೇನೆ ೧೯೭೮ನೇ ಇಸವಿಯಲ್ಲಿ ಚುನಾವಣೆ ನಡೆಯಿತು. ಸಭಾಪತಿಯವರೇ, ಆಗಿನ ಸಭಾಪತಿಯವರ ಮತ ಕ್ಷೇತ್ರದಲ್ಲಿ ನಾವು ವಿರೋಧಪಕ್ಷದವರಾಗಿ, ಒಮ್ಮತದವರಾಗಿ, ಬೇರೆಯಾರನ್ನೂ ನಿಲ್ಲಿಸದೆ ಇರತಕ್ಕಂಥ ತೀರ್ಮಾನ ಮಾಡಿದೆವು. ಒಂದು ಹೊಸ ಆದರ್ಶವನ್ನು ಸ್ಥಾಪನೆ ಮಾಡುವ ಉದ್ದೇಶದಿಂದಲೇ ನಾವು ಅದನ್ನು ಮಾಡಿದೆವು ಆದರೆ ದುರ್ದೈವ. ಶ್ರೀಮತಿ ನಾಗರತ್ನಮ್ಮನವರು ಚುನಾವಣೆಯಲ್ಲಿ ಚುನಾಯಿತರಾಗಲು ಸಾಧ್ಯವಾಗಲಿಲ್ಲ. ಚುನಾವಣೆಯ ಸಂದರ್ಭದಲ್ಲಿ ಅಷ್ಟೆ ಹಿಂದಿನ ಪರಂಪರೆ ನಡೆದು ಬರತಕ್ಕಂಥದ್ದನ್ನು ನಾನು ಇಲ್ಲಿ ಸ್ಪಷ್ಟಮಾಡಬಯಸುತ್ತೇನೆ. ಈ ಸಲದ ಚುನಾವಣೆಯನ್ನೂ ಕೂಡ ಸಭೆಯ ಸಭಾಪತಿಗಳನ್ನು ಅವಿರೋಧವಾಗಿ ವಿರೋಧಪಕ್ಷದ ವತಿಯಿಂದ ಒಮ್ಮತದವರನ್ನು ಹಾಕತಕ್ಕಂಥ ಪ್ರಶ್ನೆ ಇರಲಿ. ಆದರೆ ಇಂಥ ಪರಂಪರೆ ಕೇವಲ ಒಂದು ಪಕ್ಷದ ಜನಕ್ಕೆ ಬರತಕ್ಕಂಥದ್ದು ಅಲ್ಲ. ಅದು ಬೆಳೆಯಲು ಸಾಧ್ಯವಿಲ್ಲ. ಆ ಪರಂಪರೆ ಬದಲಾಗಬೇಕು. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಆದರೆ ಅದು ಬದಲಾಗಬೇಕಾದರೆ ಆ ಕಡೆ ಮತ್ತು ಈ ಕಡೆ ಕುಳಿತಿರತಕ್ಕಂಥ ಎಲ್ಲ ಪಕ್ಷದವರು ಸೇರಿ ಒಂದು ನಿರ್ಧಾರಕ್ಕೆ ಬರಬೇಕು. ಈಗಲೂ ನಾನು ಅದನ್ನು ಸ್ವಾಗತ ಮಾಡುತ್ತೇನೆಂದು ನಾನು ನೆನಪು

ಮಾಡಿಕೊಟ್ಟರೆ ತಪ್ಪಾಗಲಿಕ್ಕೆ ಇಲ್ಲ. ಜನತಾ ಪಕ್ಷದ ಸರ್ಕಾರ ಕೇಂದ್ರದಲ್ಲಿ ಬಂದಮೇಲೆ ನಾವು ಒಂದು ಪರಂಪರೆಯನ್ನು ಹಾಕುವ ದೃಷ್ಟಿಯಿಂದಲೇ ಸಭಾಪತಿಗಳ ಸ್ಥಾನಕ್ಕೆ ಆಳುವ ಪಕ್ಷದಿಂದ ಆರಿಸಿದಮೇಲೆ ಉಪಸಭಾಪತಿಗಳ ಸ್ಥಾನಕ್ಕೆ ಸರ್ವಾನುಮತದಿಂದ ವಿರೋಧಪಕ್ಷದ ಒಬ್ಬ ಸದಸ್ಯರನ್ನು ಆರಿಸಬೇಕೆಂದು ಹೇಳಿದಾಗ ನಮ್ಮ ಪಕ್ಷದ ಸದಸ್ಯರನ್ನು ಆರಿಸಲಿಕ್ಕೆ ಸಾಧ್ಯವಾಯಿತು. ಅದೇರೀತಿಯಲ್ಲಿ ರಾಜ್ಯಸಭೆಯಲ್ಲೂ ಕೂಡ ಅಲ್ಲಿ ನಮ್ಮ ಪಕ್ಷಕ್ಕೆ ಬಹುಮತವಿಲ್ಲದಿದ್ದರೂ ಕೂಡ ನಾವು ಚರ್ಚೆ ಮಾಡಿ ನಮ್ಮಲ್ಲಿಯೇ ಆಗಬೇಕೆಂದು ಹಠಹಿಡಿದಮೇಲೆ ವಿರೋಧಪಕ್ಷದ ಪತಿಯಿಂದ ಒಬ್ಬ ಸದಸ್ಯರನ್ನು ಉಪಸಭಾಪತಿಗಳಾಗಿ ಆರಿಸಲಾಯಿತು, ಆದರೆ ಶ್ರೀಮಾನ್ ಮೊಯಿಲಿಯವರು, ನನ್ನ ಇತರ ಸ್ನೇಹಿತರು ೧೯೮೦ನೇ ಇಸವಿಯಲ್ಲಿ ಚುನಾವಣೆ ಆದಾಗ ಆ ಪರಂಪರೆಯನ್ನು ಏತಕ್ಕೆ ತೆಗೆದು ಹಾಕಿದರು? ಏತಕ್ಕೆಂದರೆ, ಇದು ನಮ್ಮ ಸಭೆ ಅಥವಾ ಪಾರ್ಲಿಮೆಂಟ್ ಕಾರ್ಯಕಲಾಪಗಳಲ್ಲಿ ಯಾಗಲಿ ಅಥವಾ ಹೊರಗೆ ಇರತಕ್ಕಂಥ ಯಾವುದೇ ಅಭಿವೃದ್ಧಿ ಕೆಲಸಗಳಲ್ಲಿಯಾಗಲಿ ಸರ್ಕಾರಿ ಕಲಾಪಗಳು ಯಾವುದೇ ಒಂದು ಪಕ್ಷದ ಗುತ್ತಿಗೆಯಲ್ಲ. ಆ ದೃಷ್ಟಿಯಿಂದ ತಾವು ನೋಡಬೇಕು. ಆದರೆ ದುರ್ದೈವ ನಮ್ಮ ಸೂಚನೆಗಳು ಸ್ವೀಕಾರವಾಗಲಿಲ್ಲ. ಪಕ್ಷದ ಸರ್ಕಾರವೆಂದಮೇಲೆ ಅದು ಗೊತ್ತಾದ ವಿಚಾರ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ಪ್ರಜಾಪ್ರಭುತ್ವ ಎಂದಮೇಲೆ ಪಾರ್ಲಿಮೆಂಟರಿ ಅಭಿಪ್ರಾಯಗಳು ಬೆಳೆದು ಬರಬೇಕು. ತಡವಾಗಿಯಾದರೂ ನಾವು ಅದನ್ನು ತರಲಿಕ್ಕೆ ಪ್ರಯತ್ನ ಮಾಡಬೇಕು. ಇದಕ್ಕೆ ನನ್ನ ಸಹಕಾರ ಮತ್ತು ಪಕ್ಷದ ಸಹಕಾರ ನಿಮ್ಮ ಮುಂದೆ ಇದೆ. ಆ ಒಂದು ಉಜ್ವಲ ಪರಂಪರೆಯನ್ನು ಸ್ಥಾಪನೆ ಮಾಡೋಣ. ಆದರೆ ವಿರೋಧಪಕ್ಷದಲ್ಲಿ ಇದ್ದಾಗ ಮಾತ್ರ ಅದು ಬೇಕು ವಾಪಸ್ ಇಲ್ಲಿ ಬಂದಮೇಲೆ ಅದು ಇಲ್ಲ ಎನ್ನತಕ್ಕಂಥದ್ದು ಸರಿಯಲ್ಲ. ಆ ಒಂದು ದೃಷ್ಟಿಯಿಂದಲೇ ಇದನ್ನು ವಿರೋದಿಸದೆ ಸಾಧ್ಯವಿಲ್ಲ ಮಾನ್ಯ ಸಭಾಪತಿಗಳೇ ನಾವು ಅಧಿಕಾರವನ್ನು ವಹಿಸಿದ ಗಳಿಗೆಯಲ್ಲಿ ಹೇಳಿದಂಥ ಮಾತನ್ನು ಹೇಳಬಯಸುತ್ತೇನೆ. ನಮ್ಮ ಕರ್ನಾಟಕ ವಿಧಾನ ಸಭೆಯು ಇತಿಹಾಸ ದೃಷ್ಟಿಯಿಂದ ಅತ್ಯಂತ ಪುರಾತನವಾದುದು. ಬಹುಶಃ ಈ ದೇಶದಲ್ಲಿ ಬೇರೆ ಯಾವ ರಾಜ್ಯದಲ್ಲೂ ಜನ ಪ್ರತಿನಿಧಿಗಳ ಸಭೆ ಸ್ಥಾಪನೆ ಮಾಡತಕ್ಕಂಥ ಯೋಚನೆಯೂ ಕೂಡ ಮಾಡಿರಲಿಲ್ಲ. ಆ ಕಾಲದಲ್ಲಿಯೇ ಮೈಸೂರಿನಲ್ಲಿ ಪ್ರಜಾಪ್ರತಿನಿಧಿಗಳ ಸಭೆ ಇತ್ತು. ಇದಕ್ಕೆ ಒಂದು ಪರಂಪರೆ, ಒಂದು ಹಿನ್ನೆಲೆ ಇದೆ. ನಾವು ನೀವು ಕನಿಷ್ಟಪಕ್ಷ ನಮ್ಮ ಸದನದ ಕಾರ್ಯಕಲಾಪಗಳಲ್ಲಿ ಒಂದು ಹೊಸ ಪರಂಪರೆ ಏನು ಇದೆ ಅದನ್ನು ಇನ್ನೂ ಉತ್ತಮವಾಗಿ ಮಾಡಬೇಕು. ಮತ್ತೆ ಹಿಂದೆ ಇರತಕ್ಕಂಥ ಪರಂಪರೆಯನ್ನೂ ನಡೆಸಿಕೊಂಡು ಬರಬೇಕು. ಯಾವುದೇ ರೀತಿಯ ವಿಷಯದಮೇಲೆ ಗಂಭೀರವಾಗಿ ತೀವ್ರವಾಗಿ ಚರ್ಚೆಮಾಡಿ ಅದರಲ್ಲಿ ತಮ್ಮ ಪ್ರಭುತ್ವವನ್ನು ತೋರಿಸಲಿ. ಸರ್ಕಾರದಲ್ಲಿ ತಮ್ಮ ಚಾಕಚಕ್ಯತೆಯನು ತೋರಿಸಲಿ. ತಮ್ಮ ಚತುರತೆಯನ್ನು ವಾದವಿವಾದದಲ್ಲಿ ಒಬ್ಬರಿಗೊಬ್ಬರಿಗೆ ತಿಳಿಸತಕ್ಕಂಥ ಪ್ರಯತ್ನ ಮಾಡಲಿ, ಆದರೆ ಹೀಗೆ ಮಾಡುವಾಗ ಅವಾಚ್ಯ ಶಬ್ದಗಳನ್ನು ಉಪಯೋಗಿಸುವುದಾಗಲಿ, ಅಥವಾ ಸದನದ ಘನತೆ, ಪ್ರತಿಷ್ಠೆ, ಗಂಭೀರತೆ ಏನು ಇದೆ, ಅದಕ್ಕೆ ಭಂಗ ತರತಕ್ಕಂಥ ರೀತಿಯಲ್ಲಿ ವರ್ತನೆ ಮಾಡುವುದು ಬೇಡ ಇದನ್ನು ಎಲ್ಲಾ ಸದಸ್ಯರನ್ನು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ. ಈ ಹಿಂದೆ ಸ್ವಲ್ಪಮಟ್ಟಿಗೆ ಒಂದು ವಿಷಾದಕರವಾದ ಘಟನೆ ನಡೆಯಿತು. ಈ ವಿಚಾರದಲ್ಲಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೇ ಬೇಕಾಗಿದೆ. ಶಬ್ದಗ್ರಹಿಕೆ ಕಲಿತುಕೊಂಡು ಬಂದಿರತಕ್ಕಂಥ ನಮ್ಮ ಸದಸ್ಯರೆಲ್ಲರೂ ಕರ್ನಾಟಕದವರೇ. ಅದರಲ್ಲಿ ಏನೂ ಸಂದೇಹವಿಲ್ಲ. ಕರ್ನಾಟಕದ ಜನತೆ ಅವರನ್ನು ಆರಿಸಿ ಕಳುಹಿಸಿರುತ್ತದೆ. ಅವರಲ್ಲಿ ಉರ್ದು ಮಾತೃಭಾಷೆ ಇರತಕ್ಕಂಥವರು ಇರಬಹುದು. ಮರಾಠಿ ಮಾತೃಭಾಷೆ ಇರತಕ್ಕಂಥವರು ಇರಬಹುದು, ತಮಿಳು ಮಾತೃಭಾಷೆ ಇರತಕ್ಕಂಥವರು ಇರಬಹುದು ಕನ್ನಡ ಮಾತೃಭಾಷೆ ಇರತಕ್ಕಂಥವರು ಇರಬಹುದು. ನಾನು ರಾಜ್ಯ ಸಭೆಯಲ್ಲಿ ಪ್ರಮಾಣ ವಚನವನ್ನು ಮಾಡಿದಾಗ ನಾನು ಕನ್ನಡದಲ್ಲಿಯೇ ಮಾಡಿದೆ. ಅಲ್ಲಿ ಯಾರು ಕೂಡ ನನ್ನನ್ನು ಪ್ರತಿಭಟಿಸಲಿಲ್ಲ. ಅಲ್ಲಿಗೆ ಬಂಗಾಳದಿಂದ ಬಂದಿದ್ದವರು ಬಂಗಾಳಿ ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಮಹಾರಾಷ್ಟ್ರದಿಂದ ಬಂದಿದ್ದವರು ಮರಾಠಿಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. ತಮಿಳ್ನಾಡಿನಿಂದ ಬಂದಿದ್ದವರು ತಮಿಳಿನಲ್ಲಿ ಅದೇರೀತಿ ಕೇರಳದಿಂದ ಬಂದಿದ್ದವರು ಮಲೆಯಾಳಂ ಭಾಷೆಯಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದರು. ಆದರೆ ಅದರ ಬಗ್ಗೆ ಒಬ್ಬರೂ ಒಂದೇ ಒಂದು ಆಕ್ಷೇಪವನ್ನೂ ಎತ್ತಲಿಲ್ಲ. ಇಲ್ಲಿ ಕನ್ನಡಕ್ಕೆ ಪ್ರಮುಖ ಸ್ಥಾನ ಇರಬೇಕು. ಕನ್ನಡವನ್ನು ರಕ್ಷಿಸುವುದಕ್ಕೆ ನಾವು ಎಷ್ಟು ಪ್ರಯತ್ನ ಮಾಡಬೇಕೋ ಅಷ್ಟನ್ನೂ ನಾವು ಮಾಡಬೇಕು. ಕನ್ನಡ ಭಾಷೆಗೆ ಅಪಮಾನ ಆಗುವುದನ್ನು ನಾವು

ಯಾರೂ ಕೂಡ ಸಹಿಸುವುದಕ್ಕಾಗುವುದಿಲ್ಲ. ಆದರೆ ಯಾರ ಮಾತೃಭಾಷೆ ಕನ್ನಡವಲ್ಲದೆ ಬೇರೆ ಇರುತ್ತದೋ ಅಂಥವರು ಅವರ ಮಾತೃಭಾಷೆಯಲ್ಲಿ ಪ್ರಮಾಣವಚನವನ್ನು ಸ್ವೀಕಾರ ಮಾಡಿದರೆ ಅದಕ್ಕೆ ನಾವು ಅಸಹನೀಯವಾಗಿ ವರ್ತನೆ ಮಾಡುವುದು ಬೇಡ. ನಮ್ಮ ಕನ್ನಡ ನಾಡಿನ ಸಂಸ್ಕೃತಿಯೇ ಬೇರೆ.

ಮಾನ್ಯ ಸಭಾಧ್ಯಕ್ಷರೆ, ನಾನಾದರೂ ಹೇಳುವುಷ್ಟೆ. ತಮಗೆ ಎಂಥ ಕಷ್ಟಪರಿಸ್ಥಿತಿ ಬಂದರೂ ಕೂಡ ತಾವು ನಗುನಗುತ್ತಾ ಎಲ್ಲರನ್ನೂ ಸಮಾಧಾನ ಮಾಡಬೇಕು. ಈ ಕುರ್ಚಿಯು ಕಾವು ಏರಿದಾಗ ನಿಮ್ಮ ಕುರ್ಚಿಯಿಂದ ಸಂಯಮ ಎಂಬ ತಣ್ಣೀರು ಹಾಕಿ ಅದನ್ನು ತಣ್ಣಗೆ ಮಾಡಬೇಕು. ಇದಕ್ಕೆ ನಮ್ಮೆಲ್ಲರ ಸಹಾಯ ಸಹಕಾರ ಖಂಡಿತವಾಗಿಯೂ ತಮಗೆ ಇದೆ. ಆ ದೇವರು ತಮಗೆ ಅಂಥ ಒಂದು ಸಂಯಮವನ್ನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಸಭಾಧ್ಯಕ್ಷರೆ, ಇವತ್ತಿನದಿವಸ ತಮ್ಮ ಚುನಾವಣೆಯು ಸರ್ವಾನುಮತದಿಂದ ಆಗಿದೆ. ಈ ಚುನಾವಣೆಯಿಂದ ಈ ಸದನದ ಎಲ್ಲ ಮಾನ್ಯ ಸದಸ್ಯರಿಗೂ ಕೂಡ ಸಂತೋಷವಾಗಿದೆ. ಅದರಲ್ಲೂ ವೈಯುಕ್ತಿಕವಾಗಿ ನನಗಂತೂ ಅಪರಿಮಿತವಾದ ಆನಂದವಾಗಿದೆ. ಏಕೆಂದರೆ ತಾವು ನನ್ನ ಕ್ಷೇತ್ರದ ಪಾರ್ಲಿಮೆಂಟ್ ಸದಸ್ಯರಾಗಿದ್ದಿರಿ. ಬಹುಶಃ ಪ್ರಜಾಪ್ರತಿನಿಧಿ ಸಭೆಯ ಇತಿಹಾಸದಲ್ಲಿ ನಾವು ನೋಡುವುದಾದರೆ, ಇಂಥ ಒಂದು ಉಜ್ವಲವಾದ ಇತಿಹಾಸವನ್ನುಳ್ಳ ಸಭೆ ಇಡೀ ದೇಶದಲ್ಲಿಯೇ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯಾಗಲಾರದು. ಇಂಥ ಒಂದು ಮಹಾನ್ ಸಭೆಯ ಸಭಾಧ್ಯಕ್ಷರಾಗಿ ಚುನಾಯಿತರಾಗಿ ಆಯ್ಕೆಯಾಗಿರುವ ಈ ಸಂದರ್ಭದಲ್ಲಿ ತಮಗೆ ವಿಶ್ವಾಸ ಪೂರ್ವಕವಾದ ಅಭಿನಂದನೆಗಳನ್ನು ನಾನು ಸಲ್ಲಿಸುವುದರ ಜೊತೆಯಲ್ಲಿ ಕೆಲವು ಉಜ್ವಲ ಪರಂಪರೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಭವ್ಯ ವಿಧಾನಸೌಧದಲ್ಲಿ ನಾವು ಮಾಡತಕ್ಕ ಕೆಲಸಗಳೇನು ? ನಾವು ಯಾವರೀತಿ ನಡೆದುಕೊಂಡು ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕು ? ಎಂಥ ಜವಾಬ್ದಾರಿ ಇದೆ ಎನ್ನುವ ಬಗ್ಗೆ ಹೇಳಬಯಸುತ್ತೇನೆ. ಆದರೆ ಅದು ಎಷ್ಟು ಭವ್ಯವಾಗಿರಬೇಕು. ಎಷ್ಟು ಗಂಭೀರವಾಗಿರಬೇಕು, ಎಂಬುದು ಬೇರೆ ವಿಚಾರ. ಮಾನ್ಯ ಸದಸ್ಯರ ಮಧ್ಯೆ ನಡೆಯುತಕ್ಕ ಚರ್ಚೆ ಏನಿದೆ ಅದು ಮಾತ್ರ ಗಂಭೀರತೆಯನ್ನು ಅನುಸರಿಸಿದೆ ಯೆಂದು ಅಲ್ಲ. ತಾವು ಆ ಸ್ಥಾನದಲ್ಲಿ ಕುಳಿತಿರುವವರೆಗೂ ನ್ಯಾಯಾಧಿಪತಿಗಳಾಗಿರಬೇಕು, ತಾವು ಕೈಯಲ್ಲಿ ಹಿಡಿದಿರತಕ್ಕ ತಕ್ಕಡಿ ಒಂದುಕಡೆ ಭಾರವಾಗಿರಬಹುದು, ಇನ್ನೊಂದು ಕಡೆ ಹಗುರವಾಗಿರಬಹುದು. ಆದರೆ, ಆ ಏರುಪೇರುಗಳನ್ನು ಸರಿಪಡಿಸಿ ಸರಿಸಮಾನವಾಗಿ ನಿಲ್ಲಿಸತಕ್ಕ ಚೈತನ್ಯ ನಿಮ್ಮಲ್ಲಿದೆಯೆಂದು ನಾವು ಭರವಸೆಯನ್ನು ಇಟ್ಟುಕೊಂಡಿದ್ದೇವೆ. ಈ ಸದನದಲ್ಲಿ ಯಾವುದೇ ಒಂದು ಸಮಸ್ಯೆಯನ್ನಾಗಲಿ ವಿಚಾರವನ್ನಾಗಲಿ ಕೇವಲ ಚರ್ಚೆಮಾಡಿದ ಮಾತ್ರಕ್ಕೇ ಯಾವುದೇ ಪ್ರಯೋಜನವೂ ಆಗುವುದಿಲ್ಲ. ಈ ಕರ್ನಾಟಕ ಜನತೆಯ ಆಗುಹೋಗುಗಳನ್ನು ಮಾನ್ಯ ಸದಸ್ಯರು ಇಲ್ಲಿ ಚರ್ಚೆಮಾಡುತ್ತಾರೆ. ಆದರೆ, ಈ ಚರ್ಚೆಯ ಪರಿಣಾಮ ಸಾಮಾನ್ಯ ಜನತೆಗೆ ಸಾಮಾಜಿಕ ಹಾಗೂ ಆರ್ಥಿಕ ನ್ಯಾಯ ಸಿಕ್ಕಬೇಕು. ಇಲ್ಲಿ ನಡೆಯುತಕ್ಕ ಕಾರ್ಯಕ್ರಮಗಳು ಹೊರಗಡೆ ಇರತಕ್ಕ ದುರ್ಬಲವರ್ಗದ ಜನತೆಗೆ ಅನುಕೂಲವಾಗುವಂಥ ಶಕ್ತಿಯನ್ನು ತುಂಬುವ ರೀತಿಯಲ್ಲಿ ಇದ್ದರೆ, ಅಂಥ ಒಂದು ಉಪಯುಕ್ತ ಚರ್ಚೆ ಇಲ್ಲಿ ನಡೆದರೆ, ನಾವು ಈ ಸಭೆಗೆ ಬಂದು ಕೂತಿದ್ದಕ್ಕೂ ಸಾರ್ಥಕವಾಗುತ್ತದೆ. ತಮ್ಮ ಮಾರ್ಗದರ್ಶನದಲ್ಲಿ ಈ ಸಭೆಯು ಉತ್ತಮ ರೀತಿಯಿಂದ ಮುಂದೆ ನಡೆದುಕೊಂಡು ಹೋಗಲಿ, ಮತ್ತು ಈ ದಿಕ್ಕಿನಲ್ಲಿ ಬರತಕ್ಕ ಎಲ್ಲ ವಿಧವಾದ ಅಡ್ಡಿ ಆತಂಕಗಳನ್ನೂ ನಿಗ್ರಹಿಸತಕ್ಕ ಶಕ್ತಿ ತಮಗೆ ಬರಲೆಂದು ಹಾರೈಸುವುದರ ಜೊತೆಗೆ ತಾವು ನ್ಯಾಯ ನಿಷ್ಠೆಯಿಂದಲೂ ಕರ್ತವ್ಯಗಳನ್ನು ಪರಿಪಾಲಿಸುತ್ತೀರೆಂದು ನಾವು ಭರವಸೆಯನ್ನು ಇಟ್ಟುಕೊಂಡಿದ್ದೇವೆ.

ಮಾನ್ಯ ಸಭಾಧ್ಯಕ್ಷರೆ, ತಾವು ಇಂಥ ಒಂದು ಕರ್ತವ್ಯವನ್ನು ನಿರ್ವಹಿಸುವಾಗ ತಮಗೆ ಇನ್ನೂ ಒಂದು ಮಾತನ್ನು ಹೇಳಬಯಸುತ್ತೇನೆ. ಅದೇನೆಂದರೆ, ಎಲ್ಲರಿಗೂ ಗೊತ್ತಿರುವಂತೆ ಪ್ರಜಾ ಪ್ರಭುತ್ವದಲ್ಲಿ ಪತ್ರಿಕಾ ರಂಗಕ್ಕೆ ಕೂಡ ಒಂದು ಪ್ರಮುಖ ಸ್ಥಾನವನ್ನು ಕೊಟ್ಟು ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ಏಕೆಂದರೆ, ಅವರ ಒಂದು ಸಹಕಾರ ಕೂಡ ನಮಗೆ ಹೆಚ್ಚಿನ ರೀತಿಯಲ್ಲಿ ಬೇಕಾಗುತ್ತದೆ. ಅವರ ಹಕ್ಕುಗಳನ್ನು ರಕ್ಷಣೆ ಮಾಡುವುದರ ಜೊತೆಗೆ ಅನೇಕ ಸಂದರ್ಭಗಳಲ್ಲಿ ಈ ಸದನದ ಸದಸ್ಯರ ಹಕ್ಕುಗಳನ್ನು ಈ ಸದನದ ಒಳಗೆ ಹಾಗೂ ಹೊರಗೆ ರಕ್ಷಣೆ ಮಾಡತಕ್ಕ ಜವಾಬ್ದಾರಿ ಕೂಡ ತಮಗೇ ಸೇರಿದ್ದು. ಈ ಒಂದು ಜವಾಬ್ದಾರಿಯನ್ನು ನಿರ್ವಹಿಸುವ ದಿಕ್ಕಿನಲ್ಲಿ ತಾವು ಹಿಂದು ಮುಂದು ನೋಡುವುದಿಲ್ಲವೆಂದು ನಮಗೆ ಸಂಪೂರ್ಣ ವಿಶ್ವಾಸ ಇದೆ. ರಾಜ್ಯದ ಜನತೆಯು ಆಶೋತ್ತರ

ಗಳನ್ನು ನಾವು ಈಡೇರಿಸುವ ಭರವಸೆಯನ್ನು ಕೊಟ್ಟು ಈ ಸದನಕ್ಕೆ ಸದಸ್ಯರಾಗಿ ಬಂದಿದ್ದೇವೆ. ಆದ್ದರಿಂದ ಅವರ ಆಶೋತ್ತರಗಳನ್ನು ಈಡೇರಿಸುವ ದಿಕ್ಕಿನಲ್ಲಿ ಕೆಲಸ ಮಾಡತಕ್ಕ ಕಾರ್ಯಾಗಾರ ಈ ಸದನವಾಗಬೇಕು. ಈ ಜವಾಬ್ದಾರಿ ತಮ್ಮ ಹಾಗೂ ನಮ್ಮೆಲ್ಲರ ಮೇಲೂ ಇದೆ. ಆ ಕಡೆ ಕುಳಿತಿರತಕ್ಕ ಸದಸ್ಯರಾಗಲಿ, ಅಥವಾ ಈಕಡೆ ಕುಳಿತಿರತಕ್ಕ ಸದಸ್ಯರಾಗಲಿ ಜನತೆಯ ಆಶೋತ್ತರಗಳನ್ನು ಈಡೇರಿಸುವ ಕಾರ್ಯಕ್ಕೆ ವಿರುದ್ಧವಾಗಿ ಹೋಗುವ ಸನ್ನಿವೇಶ ಬಂದಾಗ ಅದನ್ನು ಸರಿಪಡಿಸಿ ಒಳ್ಳೆಯ ಮಾರ್ಗದಲ್ಲಿ ಕೊಂಡೊಯ್ಯುವ ಶಕ್ತಿ ನಮ್ಮಲ್ಲಿ ಬರಬೇಕಾಗುತ್ತದೆ. ಮುಖ್ಯವಾಗಿ ಪ್ರಜಾಪ್ರಭುತ್ವದ ಉತ್ತಮ ಪರಂಪರೆಗಳನ್ನು ಕಾಯ್ದುಕೊಳ್ಳಬೇಕಾಗಿದೆ. ಅಷ್ಟೇ ಅಲ್ಲ ಇದರ ಜೊತೆಯಲ್ಲೇ ಈ ಪ್ರಜಾಪ್ರಭುತ್ವದ ನೀತಿ ಏನು ಎಂಬುದನ್ನು ಜನತೆಗೆ ಅರ್ಥವತ್ತಾಗಿ ತಿಳಿಸುವ ಕೆಲಸವನ್ನೂ ಕೂಡ ನಾವು ಮಾಡಬೇಕಾಗಿದೆ. ಮಾನ್ಯ ಮುಖ್ಯ ಮಂತ್ರಿಯವರು ಪರಂಪರೆಯ ವಿಚಾರದಲ್ಲಿ ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಅದೇನೆಂದರೆ, ನೀವು ಇಂಥ ಪರಂಪರೆಗಳನ್ನು ಉಳಿಸಿಕೊಂಡು ಹೋಗುವ ವಿಚಾರ ವಿರೋಧಪಕ್ಷದಲ್ಲಿ ಬಂದು ಕೂತಾಗ ನೆನಪಿಗೆ ಬರುತ್ತದೆ, ಆದರೆ ಅದೇ ಆಡಳಿತ ಪಕ್ಷದಲ್ಲಿ ಬಂದು ಕೂತಾಗ ಅದು ಮರೆತುಹೋಗುತ್ತದೆ'' ಎನ್ನುವುದು. ಆದರೆ ಇವತ್ತು ತಾವು ಅಲ್ಲಿಗೆ ಬಂದಿರುವುದರಿಂದ ಈ ಮಾತನ್ನು ಮರೆಯಬಾರದು. ಏಕೆಂದರೆ ಇದು ಮುಂದಿನ ಪರಂಪರೆಯ ಪ್ರಶ್ನೆ. ಇದು ಮುಂದೆ ಬರತಕ್ಕವರಿಗೆ ಆದರ್ಶ ಪ್ರಾಯವಾಗಿರಬೇಕು. ಕೇವಲ ಚರ್ಚೆ ಮಾಡುವುದರಿಂದಲೇ ಈ ಪರಂಪರೆಯ ವಿಚಾರ ಇತ್ಯರ್ಥವಾಗುವುದಿಲ್ಲ. ಇದು ಎಲ್ಲರಿಗೂ ಅರ್ಥವಾಗುವಂಥ ವಸ್ತುನಿಷ್ಟ ವಿಚಾರ. ಅದನ್ನು ನಾವೂ, ನೀವೂ ಮಾಡಲಿಲ್ಲವೆಂದು ಹೇಳುವುದು ಸರಿಯಲ್ಲ. ಈ ಸದನದ ಕಾರ್ಯಕಲಾಪಗಳು ಸರಿಯಾಗಿ ನಡೆದುಕೊಂಡು ಹೋಗುವಂತೆ ನಿಮಗೆ ನಾವು ಸಹಕಾರವನ್ನು ಕೊಡುತ್ತೇವೆ. ವಿರೋಧಪಕ್ಷದವರಿಗೆ ಅಧ್ಯಕ್ಷ ಸ್ಥಾನವನ್ನು ಕೊಟ್ಟಿರುವ ಪ್ರಸಂಗ ಪಾರ್ಲಿಮೆಂಟ್‌ನಲ್ಲೂ ಆಗಿದೆ, ರಾಜ್ಯ ಸಭೆಯಲ್ಲೂ ಆಗಿದೆ. ಇಲ್ಲಿನ ವಿಧಾನಪರಿಷತ್ತಿನಲ್ಲಿ ಕೂಡ ತಮಗೇ ಗೊತ್ತಿರುವಂತೆ ಒಮ್ಮೆ ಜನತಾಪಕ್ಷದ ಅಭ್ಯರ್ಥಿ ಮಾನ್ಯ ಕೃಷ್ಣಯ್ಯರ್‌ರವರಿಗೂ ಮತ್ತು ಇನ್ನೊಂದು ಸಾರಿ ಸ್ವತಂತ್ರ ಪಕ್ಷದ ಅಭ್ಯರ್ಥಿಯಾದ ಮಾನ್ಯ ಮಲಕರೆಡ್ಡಿಯವರಿಗೂ ಉಪ ಸಭಾಪತಿಯ ಪೀಠಕ್ಕೆ ಆಯ್ಕೆ ಮಾಡಲು ಅವಕಾಶ ನೀಡುವ ಮೂಲಕ ಒಂದು ಪರಂಪರೆಯನ್ನು ನಾವು ಉಳಿಸಿಕೊಂಡು ಬಂದಿದ್ದೇವೆ. ಆದರೆ ಮುಂದೆ ಯಾವ ರೀತಿಯ ಪರಂಪರೆಗಳು ಅನುಷ್ಠಾನಕ್ಕೆ ಬರುತ್ತವೆ ಎಂಬುದನ್ನು ನಾವು ಕಾದು ನೋಡಬೇಕಾಗಿದೆಯೆಂದು ನಾನು ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಮಾನ್ಯ ಆಡಳಿತ ಪಕ್ಷದವರು ಪರಂಪರೆಯ ಒಂದು ವಿಚಾರವನ್ನು ಇಲ್ಲಿ ವಾದ ಮಾಡಿದ್ದಾರೆ. ಅಷ್ಟೇ ಅಲ್ಲ ಅದರ ಬಗ್ಗೆ ಹೋರಾಟವನ್ನೂ ಕೂಡ ಮಾಡಿದ್ದಾರೆ. ಆ ಹೋರಾಟ ಇನ್ನೂ ಉಳಿದಿದೆಯೇ ? ಬತ್ತಿ ಹೋಗಿದೆಯೇ ಎಂಬುದನ್ನು ನಾವು ಕಾದು ನೋಡಬೇಕಾಗಿದೆ. ಈ ಸದನದ ನಾಯಕರು ತಮ್ಮ ಸ್ಪಷ್ಟವಾದ ಅಭಿಪ್ರಾಯವನ್ನು ಇದರ ಬಗ್ಗೆ ವ್ಯಕ್ತಪಡಿಸಿ ಈ ಸತ್ಸಂಪ್ರದಾಯಗಳನ್ನು ನಾವು ಉಳಿಸಿಕೊಂಡು ಹೋಗುತ್ತೇವೆಂದು ಹೇಳಿದ್ದಾರೆ. ಅವರು ಹೇಳಿರುವ ಮಾತನ್ನು ನಾನು ಖಂಡಿತವಾಗಿ ಸ್ವಾಗತ ಮಾಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಹೇಳಲೇಬೇಕಾಗಿದೆ. ಅದೇನೆಂದರೆ, ಈದಿವಸ ನಾವು ಇಲ್ಲಿ ಸದಸ್ಯರಾಗಿ ಪ್ರಮಾಣವಚನವನ್ನು ಸ್ವೀಕಾರ ಮಾಡುತ್ತಿದ್ದ ಸಂದರ್ಭದಲ್ಲಿಯೇ ಒಂದು ಅಹಿತಕರವಾದ ಘಟನೆ ನಡೆಯಿತು. ಇದೂ ಸೇರಿ ನಾನು ಮೂರನೇಬಾರಿಗೆ ಈ ವಿಧಾನಸಭೆಗೆ ಆಯ್ಕೆಯಾಗಿ ಬರುತ್ತಿದ್ದೇನೆ. ಆದರೆ ನನಗೆ ಗೊತ್ತಿರುವಂತೆ ನನ್ನ ಶಾಸಕನ ಜೀವನದಲ್ಲಿ ಒಮ್ಮೆ ಕೂಡ ಇಂಥ ಘಟನೆ ನಡೆದದ್ದು ಇಲ್ಲ. ಮಾನ್ಯ ಸದಸ್ಯರೊಬ್ಬರು ಇನ್ನೊಬ್ಬ ಸದಸ್ಯರ ಶಾಲನ್ನು ಎಳೆದುಕೊಂಡು ಹೋದರು. Vigilance is the price of Democracy. ಅಂಥಾದ್ದು ನಡೆಯಬಾರದು. ಅವರೂ ಗೌರವಾನ್ವಿತ ಸದಸ್ಯರು. ಒಬ್ಬ ಸದಸ್ಯರು ಮತ್ತೊಬ್ಬ ಸದಸ್ಯರ ಮೈಮೇಲೆ ಕೈ ಹಾಕತಕ್ಕದ್ದು ಸರಿಯಲ್ಲ. ನಾವು ಇನ್ನೂ ಪ್ರಮಾಣ ವಚನ ಸ್ವೀಕಾರ ಮಾಡುವ ಸಂದರ್ಭದಲ್ಲಿಯೇ ಇಂಥ ಒಂದು ಘಟನೆ ನಡೆದುಹೋಯಿತು. ಆದ್ದರಿಂದ ನಾನಾದರೂ ತಮ್ಮ ಮೂಲಕ ಕೇಳಿಕೊಳ್ಳುವುದಿಷ್ಟೆ ; ಇನ್ನುಮುಂದೆ ಇಂಥ ಪ್ರಕರಣಗಳು ಆಗದಂತೆ ಈ ಸದನದ ಎರಡೂ ಕಡೆಯ ಮಾನ್ಯ ಸದಸ್ಯರುಗಳೂ ನೋಡಿಕೊಳ್ಳಬೇಕು. ಏಕೆಂದರೆ, that will be mobocracy. ನಾವು ಜಾಗೃತರಾಗಿದ್ದರೆ ಮಾತ್ರ ಈ ಪ್ರಜಾಪ್ರಭುತ್ವವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಹೋದರೆ ಅದು ಸಾಧ್ಯವಾಗುವುದಿಲ್ಲವೆಂದು ನಾನು

ಹೇಳಬೇಕಾಗುತ್ತದೆ. ಈ ಸದನದಲ್ಲಿ ಅನೇಕ ರೀತಿಯ ಪ್ರಚೋದನೆಗಳು ಬರಬಹುದು. ಅದು ಸಿಟ್ಟಿನ ಹಂತಕ್ಕೆ ಹೋಗಬಹುದು. ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಒಂದು ಇತಿಮಿತಿ ಇರುತ್ತದೆ. ಸಂಯಮ ಎಂಬುದು ಇರುತ್ತದೆ. ಸಂಯಮ ಇಲ್ಲದಿದ್ದರೆ ಅದು ನಿಜವಾಗಿಯೂ ಪ್ರಜಾಪ್ರಭುತ್ವವೇ ಅಲ್ಲ. ಆದ್ದರಿಂದ, ಇನ್ನುಮುಂದೆ ಇಂಥ ಘಟನೆಗಳು ಆಗದಂತೆ ನೋಡಿಕೊಳ್ಳಬೇಕು. Democracy should not be converted into mobocracy. ಇಲ್ಲಿ ಸಂಯಮವನ್ನು ಉಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗದಿದ್ದರೆ ಹೊರಗಿನ ಸಮಾಜದಲ್ಲಿ ಕೂಡ ಸಂಯಮವನ್ನು ಉಳಿಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ ; ಎನ್ನುವ ಮಾತನ್ನು ತಮ್ಮ ಮೂಲಕ ಸದನಕ್ಕೆ ಹೇಳಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ತಾವು ಇವತ್ತಿನ ದಿವಸ ಈ ಸದನದ ಒಂದು ಉನ್ನತ ಸ್ಥಾನವನ್ನು ಅಲಂಕರಿಸಿದ್ದೀರಿ. ಈ ಸದನದ ಸದಸ್ಯರ ಹಕ್ಕುಬಾಧ್ಯತೆಗಳನ್ನೂ, ರಾಜ್ಯದ ಜನತೆಯ ಅಪೇಕ್ಷೆಗಳನ್ನೂ ಅರಿತುಕೊಂಡು ಅದರಲ್ಲೂ ದುರ್ಬಲವರ್ಗದವರ, ಅಲ್ಪಸಂಖ್ಯಾತರ, ಹಿತವನ್ನು ರಕ್ಷಣೆ ಮಾಡುವ ಉದ್ದೇಶದಿಂದ ನಾವೂ, ನೀವೂ, ಇಲ್ಲಿ ಸೇರಿದ್ದೇವೆ. ಇಂದಿನ ಸಮಾಜದ ಜನತೆಗೆ ಬೇಕಾಗಿರತಕ್ಕ ಸಾಮಾಜಿಕ ನ್ಯಾಯದ ರಥವನ್ನು ಮುನ್ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ ತಮಗೆ ನಮ್ಮ ವಿರೋಧಪಕ್ಷದ ಪತಿಯಿಂದ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ. ಕರ್ನಾಟಕ ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸುವ ದಿಸೆಯಲ್ಲಿ ನೀವು ಸಫಲರಾಗಲಿ ಎಂದು ನನ್ನ ಆಶಯವನ್ನು ವ್ಯಕ್ತಪಡಿಸಿ ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಮಾಡಿಕೊಟ್ಟ ತಮಗೆ ನನ್ನ ವಿಶ್ವಾಸ ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ (ಸೊರಬ).— ಸನ್ಮಾನ್ಯ ಸಭಾಧ್ಯಕ್ಷರೇ, ಈ ಇಡೀ ಸದನದ ಎಲ್ಲಾ ಸದಸ್ಯರ ಸಂತೋಷದಲ್ಲಿ ನಾನೂ ಕೂಡ ಭಾಗಿಯಾಗಿ ಒಂದೆರಡು ಮಾತುಗಳನ್ನು ಆಡಬಯಸುತ್ತೇನೆ.

ತಾವು ಅಧ್ಯಕ್ಷರಾಗುತ್ತೀರಿ ಎಂಬ ವಿಚಾರ ನನಗೆ ನಿನ್ನೆಯ ದಿವಸ ತಿಳಿದಾಗ ನಾನು ಮನಸ್ಸಿನಲ್ಲಿ ಒಂದು ವಿಚಾರವನ್ನು ಮಾಡಿಕೊಂಡಿದ್ದೆ. ತಮ್ಮ ಆಯ್ಕೆಯ ವಿಚಾರ ನನಗೆ ಹೊಸದೇನೂ ಅಲ್ಲ. ಆದರೆ ಈ ಸ್ಥಾನಕ್ಕೆ ಮಾನ್ಯ ಚಂದ್ರೇಗೌಡರು ಆಗಬಾರದೆಂದು ಏನೂ ಅಲ್ಲ. ನನಗೆ ಗೊತ್ತಿರುವಂತೆ ಈ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವವರು ಹೆಚ್ಚಿಗೆ ವಯಸ್ಸಾದವರಾಗಿರಬೇಕು. ಇದುವರೆಗೆ ನಾನು ನಾಲ್ಕು ಚುನಾವಣೆಗಳನ್ನು ನೋಡಿದ್ದೇನೆ. ಆದ್ದರಿಂದ ನನ್ನ ಅನುಭವದಲ್ಲಿ ಹೇಳುವುದಾದರೆ ಈ ಸ್ಥಾನದಲ್ಲಿ ಸ್ವಲ್ಪ ಹೆಚ್ಚು ವಯಸ್ಸಾದವರು ಇದ್ದರೆ ಅವರಿಗೆ ಸ್ವಲ್ಪ ಸಮಾಧಾನದ ಮಾತನಾಡುವ ಗುಣ ಇರುತ್ತದೆಂಬ ನಂಬಿಕೆ ನನಗೆ ಇರುವುದರಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಆದರೆ ಅಂಥ ಸಮಾಧಾನದ ಮಾತುಗಳನ್ನಾಡುವ ಗುಣ ತಮಗೆ ಇಲ್ಲವೆಂದು ನಾನು ಹೇಳುತ್ತಿಲ್ಲ. ತಮಗೂ ಆ ಗುಣ ಇದೆ. ಆದರೂ ಅಲ್ಲಿ ಸ್ವಲ್ಪ ವಯಸ್ಸಾದವರು ಇದ್ದರೆ ಒಳ್ಳೆಯದಿತ್ತು. ಮಾನ್ಯ ಚಂದ್ರೇಗೌಡರು ಈ ಅಧ್ಯಕ್ಷ ಸ್ಥಾನದಲ್ಲಿ ಕುಳಿತರೆ ಹೇಗಾಗಬಹುದು ಎಂದು ನಾನು ಊಹೆ ಮಾಡಿದ್ದೆ. ಅನುಭವವುಳ್ಳ ಅಧ್ಯಕ್ಷರಾದರೆ ಈ ಸದನದ ನಿಯಮಾವಳಿಗಳ ಬಗ್ಗೆ, ಸತ್ಸಂಪ್ರದಾಯಗಳ ಬಗ್ಗೆ ಮತ್ತು ಭವಿಷ್ಯತ್ತಿನ ಬಗ್ಗೆ ಯೋಚನೆ ಮಾಡುವ ಅನುಭವ ಇರುತ್ತದೆ. ಮಾನ್ಯ ತಾವು ನನಗೆ ಒಳ್ಳೆಯ ಮಿತ್ರನಂತಿರುವವರ ಅಲ್ಲದೆ ಮುಂದೆಯೂ ಕೂಡ ಅದೇ ರೀತಿ ಇರತಕ್ಕವರು. ತಾವು ಆ ಸ್ಥಾನದಲ್ಲಿ ಕುಳಿತರೆ ಏನಾಗುತ್ತದೆ ಎಂಬುದಾಗಿ ಕೂಡ ನಾನು ಯೋಚನೆ ಮಾಡಿದ್ದೆ. ಇವತ್ತು ನನ್ನ ಮನಸ್ಸಿಗೆ ಬಹಳ ಸಂತೋಷವಾಗಿದೆ ಈ ಸದನದಲ್ಲಿ ಹಲವಾರು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವವರು ಇದ್ದಾರೆ. ಪ್ರತಿಯೊಬ್ಬ ಸದಸ್ಯರೂ ತಮ್ಮ ತಮ್ಮ ಪಕ್ಷದ ಪ್ರಣಾಳಿಕೆಗಳನ್ನು ಜನತೆಯ ಮುಂದಿಟ್ಟು ಇಲ್ಲಿಗೆ ಆಯ್ಕೆಯಾಗಿ ಬಂದು ಕುಳಿತಿದ್ದಾರೆ. ಸಹಜವಾಗಿರತಕ್ಕಂತಹ ಪ್ರಜಾಪ್ರಭುತ್ವದ ಲಕ್ಷಣ ಅದು. ಆದರೂ ಇಡತಕ್ಕ ವಿಚಾರಧಾರೆಗಳು ಅಥವಾ ಅಭಿಪ್ರಾಯಗಳು, ಈ ಸದನದ ಮುಂದೆ ಇಟ್ಟಾಗ ಕೆಲವೊಮ್ಮೆ ಒಂದು ಅಭಿಪ್ರಾಯಕ್ಕೆ ವಿರೋಧವಾದ ಮತ್ತೊಂದು ಅಭಿಪ್ರಾಯ, ತೀಕ್ಷ್ಣವಾದಂಥಹ ಸೆಣಸಾಟಕ್ಕೆ ಈ ಸದನದಲ್ಲಿ ನಿಂತಾಗ ತಮ್ಮ ಪಾತ್ರ ಬಹಳ ಹಿರಿದಾಗುತ್ತದೆ ಆಗ ತಮ್ಮ ತೀರ್ಪು ಅಂತಿಮವಾಗಿ ಒಡಮೂಡಿ ಬರತಕ್ಕ ಸಂದರ್ಭದಲ್ಲಿ ಹಲವಾರು ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಅಂತಹ ಸಾಮರ್ಥ್ಯ ತಮಗೆ ಇದೆಯೇ ಎನ್ನತಕ್ಕ ಪ್ರಶ್ನೆಯನ್ನು ಇಟ್ಟಾಗ, ಸ್ಪಷ್ಟವಾಗಿ ನನ್ನ ಮನಸ್ಸಿಗೆ ಗೋಚರವಾಯಿತು ತಮಗೆ ಇಂತಹ ಗುಣ ವಿಶೇಷಗಳು ತಮಗೆ ಇವೆ ಎಂದು ನನ್ನ ಮನಸಿಗೆ ಸಂತೋಷವಾಗಿದೆ. ನಾನು ವಿಧಾನ ಪರಿಷತ್ತಿನ ಸಭಾ ನಾಯಕನಾಗಿ ಕಂದಾಯ ಇಲಾಖೆಯ ಸಚಿವನಾಗಿದ್ದಾಗ

ತಾವು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿದ್ದೀರಿ. ತಮಗೆ ತುಂಬಾ ತಾಳ್ಮೆ ಇದೆ. ಇಲ್ಲಿ ಅಧ್ಯಕ್ಷರಾಗಿ ಕುಳಿತುಕೊಳ್ಳತಕ್ಕ ವ್ಯಕ್ತಿಗೆ ಮುಖ್ಯವಾಗಿ ಇರಬೇಕಾದ್ದು ಸಹನೆ. ಆ ಸಹನೆಯನ್ನು ಯಾರು ಕಳೆದುಕೊಳ್ಳುತ್ತಾನೆ ಅವರು ಸಭಾಧ್ಯಕ್ಷರ ಕಾರ್ಯದಲ್ಲಿ ನೂರಕ್ಕೆ ೫೦ ರಷ್ಟು ಲೋಪ ಅಲ್ಲಿ ತತ್‌ಕ್ಷಣ ಬರುತ್ತದೆ. ಅದನ್ನು ಬರೀ ತಮ್ಮಿಂದಲೇ ನಿರೀಕ್ಷೆ ಮಾಡಿದರೂ ಕೂಡ ತಪ್ಪಾಗುತ್ತದೆ. ಮಾನ್ಯ ಸದಸ್ಯರು ಯಾರೇ ಆಗಲಿ ಆ ಕಡೆಯವರಾಗಲೀ ಈ ಕಡೆಯವರಾಗಲೀ ಯಾರೇ ಇರಬಹುದು, ಯಾವುದೇ ಪಕ್ಷಕ್ಕೆ ಸೇರಿರಬಹುದು ಅವರು ನಾನು ಸಭಾಧ್ಯಕ್ಷನಾಗಿ ಬಂದು ಕುಳಿತಿದ್ದರೆ ನಾನು ಏನು ಮಾಡಬಲ್ಲೆ ಎನ್ನತಕ್ಕ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇಂತಹ ಪ್ರಶ್ನೆಗಳನ್ನು ಇಟ್ಟು, ಸಭಾಧ್ಯಕ್ಷರ ನಿಯಮ, ಸಭೆಯ ನಿಯಮ, ಇದರ ಇತಿಮಿತಿಯನ್ನೊಳಗೊಂಡು ಅವರೂ ಕೂಡ ಒಬ್ಬ ವ್ಯಕ್ತಿಯಾಗಿ ಅಲ್ಲಿ ಕುಳಿತಿರುತ್ತಾರೆ, ನಮಗೆ ಇರತಕ್ಕ ಸಂಪೂರ್ಣವಾದ ಬೆಂಬಲವನ್ನು ಕಾನೂನಿನ ಚೌಕಟ್ಟಿನೊಳಗೆ ನಾವೆಲ್ಲರೂ ಸೇರಿ ನೀಡಬೇಕಾಗುತ್ತದೆ, ಇದು ನಮ್ಮ ಆದ್ಯ ಕರ್ತವ್ಯವಾಗುತ್ತದೆ. ಈ ದೃಷ್ಟಿಯಿಂದ ನಾವೆಲ್ಲರೂ ಸಂಪೂರ್ಣ ಸಹಕಾರವನ್ನು ತಮಗೆ ಕೊಡುತ್ತೇವೆ ಎನ್ನುವ ನಂಬಿಕೆ ಇದೆ, ಇದೇ ಮಾತನ್ನು ಸಭಾ ನಾಯಕರಾದ ಮುಖ್ಯಮಂತ್ರಿಗಳು ತಿಳಿಸಿದ್ದಾರೆ. ವಿರೋಧ ಪಕ್ಷದ ನಾಯಕರೂ ಕೂಡ ಸ್ಪಷ್ಟವಾದ ಭಾಷೆಯಲ್ಲಿ ಅವರು ಕೂಡ ಹೇಳಿದ್ದಾರೆ. ಈ ಅಂಶವನ್ನು ಪ್ರತಿಯೊಬ್ಬರೂ ಭಾಷಣ ಮಾಡಿ ಹೇಳುವುದಕ್ಕೆ ಆಗುವುದಿಲ್ಲ, ಎಲ್ಲರೂ ಕೊಟ್ಟಿದ್ದಾರೆ ಎನ್ನತಕ್ಕ ಭಾವನೆಯನ್ನು ನೀವು ಕೂಡ ಇಟ್ಟುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ತಮಗೆ ಆ ಶಕ್ತಿ ಮತ್ತು ಸಾಮರ್ಥ್ಯ ಕಾನೂನಿನ ಅರಿವು ಮತ್ತು ಸಮಾಧಾನಕರವಾದಂತಹ ಒಂದು ವಿಶೇಷವಾಗಿರತಕ್ಕ ಗುಣ ತಮ್ಮ ಹತ್ತಿರ ಇದೆ ಎನ್ನತಕ್ಕ ನನ್ನ ಅನಿಸಿಕೆಯಾದರೂ ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯರೂ, ಸಾಮರ್ಥ್ಯವುಳ್ಳವರ ಎನ್ನತಕ್ಕ ಅನಿಸಿಕೆ ಎಲ್ಲರ ಮನಸ್ಸಿನಲ್ಲಿಯೂ ಬಂದಿದೆ. ಈ ಸದನಕ್ಕೆ ಹೊಸದಾಗಿ ಬಂದಿರತಕ್ಕ ಸದಸ್ಯರನ್ನು ಈಗ ಸ್ವಾಗತ ಮಾಡತಕ್ಕಂತಹ ಸಂದರ್ಭ, ಅವರು ಯಾರೇ ಇರಬಹುದು ಸಂತೋಷಪಡತಕ್ಕಂತಹ ಸಂದರ್ಭ. ಹಿಂದೆ ಈ ಸದನದಲ್ಲಿ ಸೇವೆ ಸಲ್ಲಿಸಿರತಕ್ಕವರು ಪುನಃ ಜನತೆಯ ಬೆಂಬಲವನ್ನು ಪಡೆದು ಇಲ್ಲಿ ಬಂದು ಕುಳಿತಿದ್ದಾರೆ. ಹಿಂದೆ ಅನುಭವ ಇರತಕ್ಕವರಿಗೆ ಇದೇನು ಹೊಸತಲ್ಲ. ನಾನು ೧೯೬೭ನೇ ಇಸವಿಯಲ್ಲಿ ಈ ಸಭೆಗೆ ಹೊಸದಾಗಿ ಬಂದಾಗ ಮಾನ್ಯ ನಾರಾಯಣಕುಮಾರ್ ರೀತಿಯಲ್ಲಿಯೇ ಸ್ವಲ್ಪ ಆ ಧಾಟಿಯಲ್ಲಿಯೇ ಹೆಜ್ಜೆ ಇಡತಕ್ಕ ಆ ವರ್ಗಕ್ಕೆ ಸೇರಿದ್ದವನು ನಾನು. ಕೆಲವೊಮ್ಮೆ ಆ ಭಾವನೆ ಬರುತ್ತದೆ. ಜನರಿಗೆ ಮಾತು ಕೊಟ್ಟಿರುವುದರಿಂದ ಅದನ್ನು ಉಳಿಸಿಕೊಳ್ಳಬೇಕು ಎನ್ನತಕ್ಕ ತೀವ್ರವಾದಂತಹ ಒಂದು ಅನಿಸಿಕೆ ಕೆಲವೊಮ್ಮೆ ಒಂದು ಹೆಜ್ಜೆ ಮುಂದೆ ಹೋಗಿ ಅದು ಸರಿಯೋ ತಪ್ಪೋ ಗೊತ್ತಾಗುವುದಿಲ್ಲ. ಆ ಸಂದರ್ಭದಲ್ಲಿ ಈ ವಿಚಾರಧಾರೆ ಕೆಲವೊಮ್ಮೆ ಒಡಮೂಡಿ ಬರುತ್ತದೆ. ಅದನ್ನು ತಪ್ಪೆಂದು ತಿಳಿದುಕೊಳ್ಳಬಾರದು. ಆದರೆ ಆ ಸಂದರ್ಭದಲ್ಲಿ ನಮ್ಮ ವರ್ತನೆ ಎಷ್ಟರಮಟ್ಟಿಗೆ ಹೋಗಬೇಕು ಎನ್ನತಕ್ಕ ಇತಿಮಿತಿಯನ್ನು ನೋಡಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗುತ್ತದೆ ಎಲ್ಲಾ ಮಾನ್ಯ ಸದಸ್ಯರು ಇದನ್ನು ತಿಳಿದುಕೊಳ್ಳಬೇಕು. ನಾನು ಇಲ್ಲಿ ಯಾರಿಗೂ ಕೂಡ ಪಾಠ ಹೇಳುತ್ತಿಲ್ಲ ಆದರೆ ಅಧ್ಯಕ್ಷರಿಗೆ ನಾವು ಯಾವ ರೀತಿ ಸಹಕಾರ ನೀಡಬೇಕು ಎನ್ನತಕ್ಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ಆ ಸಂದರ್ಭದಲ್ಲಿ ನಮಗಿರತಕ್ಕ ಹಕ್ಕುಭಾದ್ಯತೆಗಳನ್ನು ಕೂಡ ಸ್ಪಷ್ಟವಾಗಿ ಚಲಾವಣೆ ಮಾಡತಕ್ಕ ವಿಚಾರಧಾರೆ ಕೂಡ ನಮಗೆ ಇರಬೇಕಾಗುತ್ತದೆ ಅಧ್ಯಕ್ಷರ ಇತಿಮಿತಿಯನ್ನು ಎಷ್ಟು ನೋಡಬೇಕೋ, ನಮ್ಮ ಹಕ್ಕು ಭಾದ್ಯತೆಗಳನ್ನು ಚಲಾವಣೆ ಮಾಡುವಾಗ ಅಷ್ಟೇ ಮುಖ್ಯವಾಗಿ ನೋಡಬೇಕಾಗುತ್ತದೆ. ಇದನ್ನು ಗಮನದಲ್ಲಿಟ್ಟು ನಾವು ಮಾಡಲೇಬೇಕಾಗುತ್ತದೆ. ಆದರೆ ನಾವು ಮಾಡಬೇಕಾದ ಸಂದರ್ಭದಲ್ಲಿ ನಮ್ಮ ಇತಿಮಿತಿ ಲಕ್ಷ್ಮಣಗೆರೆ ಎಷ್ಟು ? ನಾವು ಎಲ್ಲಿಯವರೆಗೆ ಹೋಗಬೇಕು ? ಜಾಸ್ತಿ ಹೋಗಿಬಿಟ್ಟರೆ ಅದು ಮತ್ತೊಂದಕ್ಕೆ ಎಡೆ ಮಾಡಿಕೊಟ್ಟೀತು ಎನ್ನತಕ್ಕ ಅನಿಸಿಕೆ ಬರುತ್ತದೆ, ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ಮುಂದೆ ಹೋಗೋಣ, ಸಂಪೂರ್ಣವಾದಂತಹ ಸಹಕಾರವನ್ನು ಮಾನ್ಯ ಅಧ್ಯಕ್ಷರಿಗೆ ನೀಡೋಣ ಅದರ ಬಗ್ಗೆ ಭಿನ್ನಾಭಿಪ್ರಾಯ ಯಾರದೂ ಕೂಡ ಇಲ್ಲ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಸತ್‌ಸಂಪ್ರದಾಯಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ, ಬೆಳೆಸಿಕೊಳ್ಳಬೇಕಾಗುತ್ತದೆ, ಅದನ್ನು ಸಭಾನಾಯಕರು ತಿಳಿಸಿದ್ದಾರೆ ವಿರೋಧ ಪಕ್ಷದ ನಾಯಕರೂ ಕೂಡ ಸ್ಪಷ್ಟವಾಗಿ ಹೇಳಿದಾರೆ. ಸಭಾನಾಯಕರಾಗಿ ಆ ಸದನದಲ್ಲಿ ಕೆಲಸ ಮಾಡುವಾಗ, ಇಷ್ಟು ದಿನಗಳಿಂದ ಸದನದ ಸದಸ್ಯನಾಗಿ ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ಕೆಲವೊಮ್ಮೆ ಸತ್‌ಸಂಪ್ರದಾಯ ಮುರಿದು ಹೋದವೇನೋ, ಕಾನೂನು

ಗಳು ಸಂಪೂರ್ಣವಾಗಿ ಮುರಿದು ಚೂರು ಆಯಿತೇನೋ ಎನ್ನತಕ್ಕ ಭಾವನೆಯನ್ನು ಕೆಲವು ಸಂದರ್ಭಗಳಲ್ಲಿ ನೋಡಿದ್ದೇವೆ. ಕೆಲವೊಮ್ಮೆ ನಮ್ಮ ಮನಸ್ಸಿಗೆ ನೋವಾಗಿದ್ದನ್ನು ನೋಡಿದ್ದೇವೆ, ನಾವು ಅನುಭವಿಸಿದ್ದೇವೆ. ಇದು ಆಗಬಾರದಾಗಿತ್ತು ಎನ್ನುವುದಕ್ಕೆ ಬದಲಾಗಿ, ಅದು ಆಗದ ಹಾಗೇ ನಾವೆಲ್ಲರೂ ಕೂಡ ನಿರ್ವಹಣೆ ಮಾಡಬೇಕೆಂದು ಹೇಳಿ, ನಾವೆಲ್ಲರೂ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು ಅಧ್ಯಕ್ಷರಿಗೆ ನೀಡೋಣ. ನಾವು ಹಿಂದೆ ಸದನದಲ್ಲಿ ಯಾವ ರೀತಿ ನಡೆದುಕೊಂಡು ಬಂದಿದ್ದೇವೆ ಎನ್ನತಕ್ಕ ವಿಚಾರವನ್ನು ತಮ್ಮ ಮೂಲಕ ಸದನದ ಸದಸ್ಯರ ಗಮನಕ್ಕೆ ತರುತ್ತಿದ್ದೇವೆ. ನಾನು ಒಳ್ಳೆಯ ರೀತಿಯಲ್ಲಿ ಒಳ್ಳೆಯ ವಿಷಯಗಳ ಬಗ್ಗೆ ಮಾತನಾಡುತ್ತಿದ್ದೇನೆ. ನಾವು ಈ ಸದನದಲ್ಲಿ ಕುಳಿತುಕೊಳ್ಳತಕ್ಕ ೫ ವರ್ಷ ಅವಧಿಯಲ್ಲಿ ದೊಡ್ಡ ಒಂದು ಕೊಡಿಗೆಯನ್ನು ಈ ಸದನಕ್ಕೆ ಕೊಟ್ಟಿದ್ದೇವೆಯೋ ? ಅನೇಕ ರಾಜ್ಯಗಳಲ್ಲಿ ಅನೇಕ ಸಭೆಗಳು ಕೆಲಸ ಮಾಡುತ್ತಿವೆ. ರಾಷ್ಟ್ರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾವು ಎತ್ತಿ ಹಿಡಿಯಬೇಕು, ಅದರ ಬಗ್ಗೆ ಅಪಾರವಾದ ಮತ್ತು ಆಳವಾದ ನಂಬಿಕೆ ಕೂಡ ಇರಬೇಕಾಗುತ್ತದೆ. ಆ ನಂಬಿಕೆಯನ್ನು ನಾವು ಯಾವಾಗ ಕಳೆದುಕೊಳ್ಳುತ್ತೇವೆಯೋ ಆಗ ಮೌಲ್ಯಗಳು ತತ್‌ಕ್ಷಣ ಮುರಿದು ಬಿದ್ದು ಹೋಗುತ್ತವೆ ಎನ್ನತಕ್ಕ ವಿಚಾರವನ್ನು ನಮ್ಮ ಗಮನದಲ್ಲಿಡಬೇಕು. ಹಿಂದೆ ಇದ್ದಂತಹ ಸದನಗಳಿಗೆ ಹೋಲಿಸಿದರೆ, ಈ ಸದನ ಕೆಲಸ ಮಾಡತಕ್ಕಂತಹ ೫ ವರ್ಷದ ಅವಧಿಯಲ್ಲಿ ನಾವು ಸತ್‌ಸಂಪ್ರದಾಯಗಳನ್ನು ನಿಯಮಗಳನ್ನು ಪಾಲನೆ ಮಾಡಬೇಕು. ನಿಯಮಗಳು ಸರಿಯಿಲ್ಲ ಅಂದರೆ ಬದಲಾವಣೆ ಮಾಡೋಣ ಹೊಸ ನಿಯಮಗಳನ್ನು ತರೋಣ. ಅದೇ ರೀತಿ ಸಂಪ್ರದಾಯಗಳು ಸರಿಯಿಲ್ಲ ಅಂದರೆ ಹೊಸ ಸಂಪ್ರದಾಯಗಳನ್ನು ತರೋಣ, ಈ ಒಂದು ವಿಚಾರವನ್ನು ಇಟ್ಟು ನಾವು ಮುಂದೆ ಹೋಗೋಣ ಅದಕ್ಕೆ ರೂಲ್ಸ್ ಕಮಿಟಿ ಮತ್ತೊಂದು ಇರುತ್ತದೆ ಅದಕ್ಕೆ ನಮ್ಮ ಸಲಹೆ ಸಹಕಾರ ಎಲ್ಲವನ್ನು ಕೊಡೋಣ ಆದರೆ ಈ ಅವಧಿಯಲ್ಲಿ ನಮ್ಮ ಕೊಡುಗೆ ಮೌಲ್ಯಗಳು ಮತ್ತು ಸಂಪ್ರದಾಯಗಳನ್ನು ಬೆಳೆಸಿ ನಿಲ್ಲಿಸಿ ಅನೇಕ ವಿಷಯಗಳಲ್ಲಿ ನಾವು ಮೇಲಕ್ಕೆ ಎತ್ತಿದ್ದೇವೆ ಎನ್ನತಕ್ಕ ಸಮಾಧಾನವನ್ನು ನಾವು ತಂದುಕೊಳ್ಳುತ್ತಾ ಈ ದಿಶೆಯಲ್ಲಿ ನಮ್ಮ ಚಿಂತನೆ ನಮ್ಮ ಹೆಜ್ಜೆ ನಮ್ಮ ಕಾರ್ಯಕ್ರಮಗಳಲ್ಲಿ ಒಡಮೂಡಿ ಬರಬೇಕು ಎನ್ನುವ ವಿಚಾರವನ್ನು ಈ ಸದನದಲ್ಲಿ ತಮ್ಮ ಮೂಲಕ ಇಡುತ್ತೇನೆ. ಮಾನ್ಯಸದಸ್ಯರಾದ ನಾರಾಯಣಕುಮಾರಾರವರಾಗಲೀ ಅಥವಾ ಬೇರೆ ಯಾರೇ ಸದಸ್ಯರು ಇರಬಹುದು, ಕರ್ನಾಟಕ ರಾಜ್ಯದಲ್ಲಿ ಕನ್ನಡಕ್ಕೆ ಅಗ್ರಸ್ಥಾನ ಕೊಡಬೇಕು. ತಮಿಳುನಾಡಿನಲ್ಲಿ ತಮಿಳು ಭಾಷೆಗೆ ಅಗ್ರಸ್ಥಾನವಿದೆ, ಕೇರಳದಲ್ಲಿ ಮಲೆಯಾಳಂ ಭಾಷೆಗೆ ಅಗ್ರಸ್ಥಾನವಿದೆ, ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗೆ ಅಗ್ರಸ್ಥಾನವಿದೆ, ಉತ್ತರ ಪ್ರದೇಶದಲ್ಲಿ ಹಿಂದಿ ಭಾಷೆಗೆ, ಪಶ್ಚಿಮ ಬಂಗಾಳದಲ್ಲಿ ಬಂಗಾಳಿ ಭಾಷೆಗೆ, ಒರಿಸ್ಸಾದಲ್ಲಿ ಒರಿಯಾ ಭಾಷೆ ಇದೇ ರೀತಿ ಪ್ರಾದೇಶಿಕ ಭಾಷೆಗಳು ಏನಿವೆ ಅವು ಬೆಳೆಯತಕ್ಕದ್ದರ ಜೊತೆಗೆ ಇಡೀ ದೇಶದ ಸಾಮರ್ಥ್ಯವನ್ನು ಕೂಡ ಹೆಚ್ಚಿಸುತ್ತದೆ, ಈ ದೃಷ್ಟಿಯಿಂದ ಕನ್ನಡಕ್ಕೆ ಎಲ್ಲಿಲ್ಲದ ಅಗ್ರಸ್ಥಾನ ನಮ್ಮ ರಾಜ್ಯದಲ್ಲೂ ಕೂಡ ದೊರಕಬೇಕು ಎನ್ನತಕ್ಕ ಮಾತನ್ನು ಮತ್ತೊಮ್ಮೆ ಹೇಳುತ್ತೇನೆ.

(ಪ್ರೇಕ್ಷಕರ ಗ್ಯಾಲರಿಯಿಂದ ಕೈ ಚಪ್ಪಾಳೆ)

ಅಧ್ಯಕ್ಷರು.— ಮೇಲೆ ಕುಳಿತಿರತಕ್ಕ ಮಿತ್ರರಿಗೆ ಹೇಳುವುದೇನೆಂದರೆ, ಚಪ್ಪಾಳೆ ತಟ್ಟುವುದು ಈ ಸಭೆಯ ಸಂಪ್ರದಾಯವಲ್ಲ, ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರು ಹೇಳತಕ್ಕ ಮಾತನ್ನು ನಾನು ಪ್ರೇಕ್ಷಕರಿಗೆ ಹೇಳತಕ್ಕ ಅಧಿಕಾರ ನನಗೆ ಇಲ್ಲ. ಅಧ್ಯಕ್ಷರು ಹೇಳತಕ್ಕಂತಹ ಮಾತನ್ನು ಪ್ರೇಕ್ಷಕರು ಮಾನ್ಯ ಮಾಡುವುದು ಒಳ್ಳೆಯದೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಅಧ್ಯಕ್ಷರು ಹೇಳಿದ ಮಾತಿಗೆ ಬೆಂಬಲ ಕೊಡುತ್ತೀರಿ ಎನ್ನುವುದು ನನ್ನ ಅಭಿಪ್ರಾಯ. ಚಪ್ಪಾಳೆ ತಟ್ಟುವುದು ಘೋಷಣೆ ಕೂಗುವುದು ಇಲ್ಲಿ ಕಾನೂನು ಪ್ರಕಾರ ಅವಕಾಶವಿಲ್ಲ. ಅಧ್ಯಕ್ಷರೇ ನಾನು ಹೇಳುತ್ತಿದ್ದೇನೆ ಆಯಾಯ ರಾಜ್ಯಗಳಲ್ಲಿ ಆಯಾಯ ಭಾಷೆಗೆ ಅಗ್ರಸ್ಥಾನ ದೊರಕಬೇಕು. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈ ಮಾತನ್ನು ಸ್ಪಷ್ಟವಾಗಿ ಹೇಳಿದ್ದಾರೆ ಇದೇ ಅಭಿಪ್ರಾಯವನ್ನು ಸದನದ ಎಲ್ಲಾ ಸದಸ್ಯರು ಸ್ಪಷ್ಟವಾಗಿ ಹೇಳಿದ್ದಾರೆ. ಕೆಲವೊಮ್ಮೆ ಇವತ್ತು ನಡೆದಂಥಹ ಘಟನೆ ನಡೆದು ಬಿಡುತ್ತದೆ. ಕನ್ನಡದ ಉತ್ಕಟಾಭಿಮಾನ ಇರುತ್ತದೆ. ಮಾತೃಭಾಷೆಯ ಬಗ್ಗೆ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಈಗಾಗಲೇ ಹೇಳಿದ್ದಾರೆ. ಹಲವಾರು ಭಾಷೆಗಳನ್ನು ಮಾತನಾಡತಕ್ಕಂತಹ ಜನಗಳಿಂದ ಮತ್ತು ಅಂತಹ ಕ್ಷೇತ್ರಗಳಿಂದ ನಾವು ಆರಿಸಿ ಬಂದಿರು

ತ್ತೇವೆ ನಾವು ಅದನ್ನು ಕೂಡ ಗಮನದಲ್ಲಿಡಬೇಕು. ಪ್ರತಿಜ್ಞಾ ವಿಧಿ ಸ್ವೀಕಾರ ಮಾಡುವಾಗ ಕನ್ನಡದಲ್ಲೇ ನಾಲ್ಕು ಮಾತು ಹೇಳುವಂತೆ ಅವರೂ ಕೂಡ ಕನ್ನಡವನ್ನು ಏತಕ್ಕೆ ಕಲಿಯಬಾರದು ? ತಮಿಳು ಭಾಷೆ ಮರಾಠಿ ಭಾಷೆ ಮಾತನಾಡತಕ್ಕಂತಹವರು ಸದಸ್ಯರಾಗಿ ಬಂದ ಮೇಲೆ ಕನ್ನಡದಲ್ಲಿ ಪ್ರತಿಜ್ಞಾವಿಧಿ ಸ್ವೀಕಾರ ಮಾಡುವಷ್ಟು ಕನ್ನಡವನ್ನು ಕಲಿತರೆ, ಎಲ್ಲರೂ ಕೂಡ ನಿಮ್ಮನ್ನು ಮೆಚ್ಚುತ್ತಾರೆ. ನಿಮಗೆ ಕನ್ನಡ ಭಾಷೆ ಬರದಿದ್ದರೆ ತಮ್ಮ ಭಾಷೆಯಲ್ಲಿಯೇ ಮಾತನಾಡಿ. ಕೊನೆಯ ಪಕ್ಷ ಪ್ರಮಾಣ ವಚನ ಸ್ವೀಕಾರ ಮಾಡುವಷ್ಟು ಕನ್ನಡವನ್ನು ಕಲಿತರೆ ಎಲ್ಲರಿಗೂ ಕೂಡ ಕ್ಷೇಮ ಮತ್ತು ಸುಕ್ಷೇಮ, ಬಹಳ ಒಳ್ಳೆಯ ದಾಗುತ್ತದೆ.

ಕನ್ನಡ ಭಾಷೆ ಬರದಿದ್ದರೆ ಕಲಿತುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕನ್ನಡ ಭಾಷೆಯನ್ನು ಕಲಿತುಕೊಳ್ಳಬೇಕು, ಕನ್ನಡ ಭಾಷೆ ಮಾತನಾಡುವುದನ್ನು ತಿಳಿದುಕೊಳ್ಳಬೇಕು ಎನ್ನುವಂತಹ ಮನಸ್ಸು ಇರಬೇಕು, ಕನ್ನಡ ಭಾಷೆಯಲ್ಲಿಯೇ ಅವರು ಪ್ರಮಾಣವಚನವನ್ನು ಸ್ವೀಕಾರ ಮಾಡಿದ್ದರೆ ಬಹಳ ಚನ್ನಾಗಿತ್ತು ಎಂದು ನನ್ನ ಭಾವನೆ. ಶ್ರೀಮಾನ್ ನಾರಾಯಣಕುಮಾರ್‌ರವರು ಒಂದು ವೇಳೆ ಆ ರೀತಿ ಮಾತನಾಡಿದ್ದರಿಂದ ಯಾರೂ ತಪ್ಪು ಅಭಿಪ್ರಾಯವನ್ನು ತಿಳಿದುಕೊಳ್ಳಬಾರದು. ಕನ್ನಡ ಭಾಷೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಮತ್ತು ವಿರೋಧಪಕ್ಷದ ನಾಯಕರೂ ಬಹಳ ಚನ್ನಾಗಿ ವರ್ಣನೆ ಮಾಡಿ ಹೇಳಿದ್ದಾರೆ. ನಾವು ಕಾನೂನು ಪ್ರಕಾರ ರೂಲ್ಸ್ ಪ್ರಕಾರ ಇಂಡಿಯನ್ ಪೀನಲ್ ಕೋಡ್ ಪ್ರಕಾರ ರೂಲಿಂಗ್ ಕೊಡಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ. ಒಂದೊಂದು ವೇಳೆ ಆ ರೀತಿ ಯಾದರೂ ಆಗಬಹುದು. ಮಾನ್ಯ ಸದಸ್ಯರು ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದ್ದರೆ ಎಲ್ಲರಿಗೂ ಗೌರವಯುತವಾಗಿ ಇರುತ್ತಿತ್ತು. ಕನ್ನಡ ನಾಡಿನಲ್ಲಿ ಕನ್ನಡಕ್ಕೆ ನಾವು ಅಗ್ರ ಸ್ಥಾನವನ್ನು ಕೊಡಬೇಕಾದ ಕರ್ತವ್ಯ ನಮ್ಮದು. ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟ ಆಶೋತ್ತರಗಳನ್ನು ಈಡೇರಿಸುವುದಕ್ಕಾಗಿ ಅವರು ಆ ರೀತಿ ಮಾತನಾಡಿರಬಹುದು. ಏನೇ ಆದರೂ ಕೂಡ ನಾವು ಎಲ್ಲರೂ ಶಾಂತಿಯುತವಾಗಿ ನಡೆದುಕೊಳ್ಳೋಣ. ನನಗೆ ನಮ್ಮ ರೈತ ಪ್ರತಿನಿಧಿಗಳನ್ನು ಕಂಡರೆ ಬಹಳ ಸಂತೋಷ. ಅವರು ತಲೆಗೆ ಹಸಿರು ಬಟ್ಟೆಯನ್ನು ಕಟ್ಟಿಕೊಂಡಿರುವುದರಿಂದ ಒಂದು ಸಂಕೇತವನ್ನು ಸೂಚಿಸುತ್ತದೆ. ನಮ್ಮ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಾವಗಲ್‌ರವರು ಮತ್ತು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಮಲ್ಲಪ್ಪನವರೂ ರೈತರ ಪ್ರತಿನಿಧಿಗಳಾಗಿದ್ದಾರೆ. ಅವರು ಆ ರೈತರ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ಅನೇಕ ಆಶೋತ್ತರಗಳನ್ನು ತಮ್ಮ ಜನರಿಗೆ ಕೊಟ್ಟಿರುತ್ತಾರೆ. ಆದರೆ ರೈತರ ಸಮಸ್ಯೆಗಳನ್ನು ಬಗೆಹರಿಸಬೇಕಾದ್ದು ಇನ್ನು ಬೇಕಾದಷ್ಟು ಇದೆ. ಮತ್ತು ಈ ಮಂತ್ರಿ ಮಂಡಲದಲ್ಲಿ ಕೆಲವರು ಹಿಂದೆ ಶಾಸಕರಾಗಿದ್ದವರು ಈಗ ಮಂತ್ರಿಗಳಾಗಿದ್ದಾರೆ. ಅವರಿಗೆ ರೈತರ ಸಮಸ್ಯೆಗಳು ಚನ್ನಾಗಿ ಗೊತ್ತಿದೆ. ತಾವು ವಿರೋಧಪಕ್ಷದವರಿಗೂ ಮತ್ತು ಆಡಳಿತ ಪಕ್ಷದವರಿಗೂ ಸರಿಸಮಾನವಾದ ರೀತಿಯಲ್ಲಿ ಈ ಸದನವನ್ನು ನಡೆಸಿಕೊಂಡು ಬರುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ತಾವು ವಯಸ್ಸಿನಲ್ಲಿ ಚಿಕ್ಕವರಿದ್ದರೂ ಕೂಡ ಈ ಹಿಂದೆ ಈ ಸದನದ ಸದಸ್ಯರಲ್ಲದಿದ್ದರೂ ಕೂಡ ತಮಗೆ ಈ ಸದನದ ಕಾರ್ಯಕಲಾಪಗಳಲ್ಲಿ ಹೆಚ್ಚು ಅನುಭವವನ್ನು ಪಡೆದುಕೊಂಡಿದ್ದೀರಿ. ಕಾರಣವೇನೆಂದರೆ ತಾವು ಮೇಲ್ಮನೆಯ ಸದಸ್ಯರಾಗಿದ್ದಾಗ ಮತ್ತು ವಿರೋಧಪಕ್ಷದ ನಾಯಕರಾಗಿ ಮತ್ತು ಮಂತ್ರಿಗಳಾಗಿ ಹಾಗೂ ಪಾರ್ಲಿಮೆಂಟ್ ಸದಸ್ಯರಾಗಿ ಹೆಚ್ಚು ಅನುಭವವನ್ನು ಪಡೆದುಕೊಂಡಿದ್ದೀರಿ. ನಿಜವಾಗಿಯೂ ಕೂಡ ತಾವು ಈ ಒಂದು ಅಧ್ಯಕ್ಷ ಪೀಠವನ್ನು ಅಲಂಕರಿಸಿರುವುದರಿಂದ ನನಗೆ ಬಹಳ ಸಂತೋಷವಾಗಿದೆ. ಈ ಮನೆಯ ಎಲ್ಲಾ ಸದಸ್ಯರು ತಮಗೆ ಸಂಪೂರ್ಣ ಸಹಕಾರವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ನಾನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ತಾವು ಅಧ್ಯಕ್ಷರಾಗಿ ತಮ್ಮ ಪೂರ್ತಿ ಅವಧಿಯನ್ನು ಮುಂದುವರಿಯುವಂತೆ ನಾನು ಆ ಭಗವಂತನನ್ನು ಪ್ರಾರ್ಥಿಸುತ್ತೇನೆ. ಮತ್ತು ತಾವು ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಸಭೆಗಳಿಗೆ ಆಗಾಗ ಹೋಗಬೇಕಾಗುತ್ತದೆ, ಈ ಒಂದು ಸಭೆಗಳು ರಾಷ್ಟ್ರಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ನಡೆಯುವಾಗ ತಾವು ಆ ಸಭೆಗಳಿಗೆ ಹೋದಾಗ ನಮ್ಮ ವಿಧಾನ ಸಭೆಯ ಸದಸ್ಯರು ಈ ರೀತಿಯ ಸಲಹೆ ಮತ್ತು ಸೂಚನೆಗಳನ್ನು ಕೊಡುತ್ತಾರೆ. ನಾವು ಆ ಸಲಹೆ ಮತ್ತು ಸೂಚನೆಗಳನ್ನು ಈ ರೀತಿ ಬಗೆಹರಿಸುತ್ತೇವೆ ಎನ್ನುವ ಒಂದು ಸಂಪ್ರದಾಯವನ್ನು ತಾವು ಹೇಳಬೇಕಾಗುತ್ತದೆ, ಆ ಎಲ್ಲಾ ರೀತಿಯ ಒಂದು ದಕ್ಷತೆ ತಮ್ಮಲ್ಲಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತೊಮ್ಮೆ ನಾನು ತಮಗೆ ಸಂಪೂರ್ಣ ಸಹಕಾರವನ್ನು ಕೊಡುತ್ತೇನೆ ಎನ್ನುವ ಭರವಸೆಯನ್ನು ಕೊಟ್ಟು ತಮಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ. ವಿ. ಎಸ್. ಆಚಾರ್ (ಉಡುಪಿ).—ಸನ್ಮಾನ್ಯ ಅಧ್ಯಕ್ಷರೇ, ತಾವು ಕರ್ನಾಟಕ ವಿಧಾನ ಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿ ಬಂದಿರುವುದರಿಂದ ನಾನು ನಮ್ಮ ಪಕ್ಷದ ಪರವಾಗಿ ಮತ್ತು ನಮ್ಮ ಶಾಸಕರ ಪರವಾಗಿ ಹಾಗೂ ಶಾಸಕಾಂಗ ಪಕ್ಷದ ಪರವಾಗಿ ಮೊಟ್ಟಮೊದಲನೆಯದಾಗಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಅಧ್ಯಕ್ಷರ ಸ್ಥಾನ ಎಂಬುದು ಬಹಳ ಗುರುತರವಾದಂಥ ಒಂದು ಸ್ಥಾನ. ಈ ಸ್ಥಾನವನ್ನು ತಾವು ಬಹಳ ಜವಾಬ್ದಾರಿಯಿಂದ ಕಾಪಾಡಿಕೊಂಡು ಬರುತ್ತೀರಿ ಎನ್ನುವ ನಂಬಿಕೆ ಕೂಡ ನನಗೆ ಇದೆ. ತಾವು ಶಾಸಕಾಂಗ ಸಭೆಯ ಕಾರ್ಯಕಲಾಪಗಳಲ್ಲಿ ಎಲ್ಲಾ ರೀತಿಯ ಅನುಭವವನ್ನು ಪಡೆದುಕೊಂಡಿದ್ದೀರಿ. ಮತ್ತು ತಾವು ಪಾರ್ಲಿಮೆಂಟ್ ಸದಸ್ಯರಾಗಿ ಹಾಗೂ ಮೇಲ್ಮನೆಯಲ್ಲಿ ವಿರೋಧಪಕ್ಷದ ಸದಸ್ಯರಾಗಿ ಹಾಗೂ ನಾಯಕರಾಗಿ ಮಂತ್ರಿಗಳಾಗಿ ಹೆಚ್ಚು ಅನುಭವವನ್ನು ಪಡೆದುಕೊಂಡಿದ್ದೀರಿ. ಈ ಮನೆಯ ಕಾರ್ಯಕಲಾಪಗಳನ್ನು ಸಂಪ್ರದಾಯಬದ್ಧವಾಗಿ ಕಾಪಾಡಿಕೊಂಡು ಬರುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಒಂದು ಶಕ್ತಿಯನ್ನು ಭಗವಂತನು ತಮಗೆ ಕೊಡಲೆಂದು ನಾನು ಹಾರೈಸುತ್ತೇನೆ. ತಾವು ಈ ಮನೆಯ ಸದಸ್ಯರ ಎಲ್ಲಾ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಂಡು ಬರುತ್ತೀರಿ ಎನ್ನುವ ನಂಬಿಕೆ ನನಗೆ ಇದೆ. ಅದರಲ್ಲಿಯೂ ನಮ್ಮ ನಾಯಕರಾದಂಥ ಹಾಗೂ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಬಹಳ ಚೆನ್ನಾಗಿ ವರ್ಣನೆ ಮಾಡಿ ಹೇಳಿದ್ದಾರೆ. ನಮ್ಮ ವಿರೋಧಪಕ್ಷದ ನಾಯಕರು ಅದೇ ರೀತಿಯಲ್ಲಿ ಹೇಳಿದ್ದಾರೆ. ಸತ್‌ಸಂಪ್ರದಾಯವನ್ನು ಕಾಪಾಡಿಕೊಂಡು ಬರಲು ಕಾನೂನಿನಿಂದ ಮಾತ್ರ ಅಲ್ಲ. ಕಾನೂನು ಪ್ರಕಾರ ಹೋದರೆ ಒಂದೊಂದು ಸಾರಿ ಕಷ್ಟವಾಗುತ್ತದೆ. ಇದಕ್ಕೆ ಸದಸ್ಯರು ಕೂಡ ಒಂದೊಂದು ಸಾರಿ ವಿಶಾಲ ಮನಸ್ಸು ಮಾಡಬೇಕಾಗುತ್ತದೆ. ನಾವೆಲ್ಲ ಜನರ ಅನುಕೂಲ ಬಿಂದುವಾಗಿರಬೇಕು. ಆ ಶಕ್ತಿಯನ್ನು ಆ ಭಗವಂತನು ಕೊಡಲೆಂದು ನಾನು ಹಾರೈಸುತ್ತೇನೆ. ಮತ್ತು ಇದೇ ಸಂದರ್ಭದಲ್ಲಿ ಶಾಸಕಾಂಗ ಪಕ್ಷದ ಪರವಾಗಿ ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅದು ಏನೆಂದರೆ ವಿಶೇಷವಾಗಿ ನಾವು ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿದೆ. ಸರ್ಕಾರವನ್ನು ರಚಿಸುವುದಕ್ಕಾಗಿ ನಾವು ನಮ್ಮ ಸಂಪೂರ್ಣ ಸಹಕಾರವನ್ನು ಕೊಟ್ಟಿದ್ದೇವೆ. ಆದರೆ ಮಂತ್ರಿಮಂಡಲದಲ್ಲಿ ಮಾತ್ರ ನಾವು ಸೇರಿಲ್ಲ. ಆದರೆ ಈ ಸರ್ಕಾರ ಜನತೆಯ ಎಲ್ಲಾ ಆಶೋತ್ತರಗಳನ್ನು ಈಡೇರಿಸುತ್ತದೆ ಎನ್ನುವ ಒಂದು ನಂಬಿಕೆ ನನಗೆ ಇದೆ. ಒಂದು ವೇಳೆ ಸರ್ಕಾರವೇನಾದರೂ ಜನರ ಆಶೋತ್ತರಗಳನ್ನು ಈಡೇರಿಸದಿದ್ದರೆ ನಾವು ನಮ್ಮ ಪಾತ್ರವನ್ನು ನಿರ್ವಹಿಸಬೇಕಾಗುತ್ತದೆ. ಸರ್ಕಾರಕ್ಕೆ ನಾವು ಕೆಲವಾರು ಸೂಚನೆ ಮತ್ತು ಸಲಹೆಗಳನ್ನು ಕೊಡಬೇಕಾಗುತ್ತದೆ. ಆದರಂತೆ ಸರ್ಕಾರ ಕೂಡ ನಡೆದುಕೊಂಡು ಜನರ ಕುಂದುಕೊರತೆಗಳನ್ನು ಈಡೇರಿಸಬೇಕಾಗುತ್ತದೆ ಮತ್ತು ಈ ಮನೆಯ ಎಲ್ಲಾ ಸದಸ್ಯರ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಂಡು ಬರುವ ಶಕ್ತಿ ದೊರೆಯಲೆಂದು ಹಾರೈಸಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ತಾವು ನಾನಾ ತರಹದ ಅನುಭವಗಳನ್ನು ಪಡೆದು ಇವೊತ್ತಿನ ದಿವಸ ಅತಿ ಜವಾಬ್ದಾರಿಯುತವಾದಂಥ ಪೀಠದಲ್ಲಿ ಕುಳಿತಿದ್ದೀರಿ. ತಮ್ಮ ಈ ಅನುಭವಗಳೆಲ್ಲಾ ತಮಗೆ ಸಹಾಯಕವಾಗಲಿ ಎಂದು ನಾನು ಹಾರೈಸುತ್ತಿದ್ದೇನೆ. ಈ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಒಂದು ನೀತಿ ಇದೆ. ಅದೇನೆಂದರೆ. Ruling Party should have their way and the Opposition should have their say. ಇದೊಂದನ್ನು ತಾವು ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ಏನು ಹೇಳಬೇಕೋ ಅದನ್ನು ಹೇಳುತ್ತೇವೆ ಮತ್ತು ಅವರು ಮಾಡುವುದನ್ನು ಮಾಡಲೇ ಬೇಕಾಗುತ್ತದೆ. ಇದನ್ನು ತಾವು ಜ್ಞಾಪಕದಲ್ಲಿಟ್ಟುಕೊಂಡು ಮತ್ತು ತಮ್ಮ ಮೇಲಿರುವ ತಕ್ಕಡಿಯನ್ನು ಜ್ಞಾಪಕದಲ್ಲಿಟ್ಟುಕೊಂಡು ತಮ್ಮ ಕೆಲಸವನ್ನು ನಿರ್ಭಯವಾಗಿ ಮಾಡಲು ದೇವರು ಶಕ್ತಿ ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಚ್. ರಂಗನಾಥ (ಹಿರಿಯೂರು).—ಸನ್ಮಾನ್ಯ ಅಧ್ಯಕ್ಷರೇ, ತಾವು ಈ ದಿವಸ ಈ ಸದನದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದೀರಿ. ಅದಕ್ಕಾಗಿ ನನಗೆ ಅತೀವ ಸಂತೋಷವಾಗಿದೆ. ಈ ಸದನದ ೨೨೪ ಸದಸ್ಯರ ಪೈಕಿ ನಾನು ತಮ್ಮನ್ನು ಹೆಚ್ಚು ಬಲ್ಲವನಾಗಿದ್ದೇನೆಂದರೆ ಅತಿಶಯೋಕ್ತಿಯಾಗಲಾರದು. ತಮಗೆ ಜ್ಞಾಪಕವಿರುವಂತೆ ನಾನು ತಮ್ಮ ಊರಿನಿಂದ ಈ ಸಭೆಯ

---

† Indicates that remarks or speeches have not been revised by the member concerned.

ಸದಸ್ಯನಾಗಿ ೧೯೭೨ರಲ್ಲಿ ಆರಿಸಿ ಬಂದಿದ್ದೆ. ಅದರ ಬಗ್ಗೆ ನಾನು ಈಗ ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈ ದಿವಸ ಅಂದರೆ ಈ ೭ನೇ ವಿಧಾನಸಭೆ ಒಂದು ವಿಶಿಷ್ಟ ರೀತಿಯ ಸಭೆಯಾಗಿದೆ. ಏಕೆಂದರೆ, ಆಡಳಿತ ನಡೆಸುತ್ತಿರುವ ಪಕ್ಷ ಹಲವಾರು ಪಕ್ಷಗಳ ಸಹಾಯದಿಂದ ಆಡಳಿತ ನಡೆಸಬೇಕಾಗಿದೆ. ನಮ್ಮ ಪಕ್ಷ ಒಂದು ವ್ಯವಸ್ಥಿತವಾದಂಥ ವಿರೋಧ ಪಕ್ಷವಷ್ಟೇ ಅಲ್ಲ, ಪ್ರತಿಪಕ್ಷವಾಗಿ ಒಂದು ವ್ಯವಸ್ಥಿತ ರೀತಿಯಿಂದ ಕೆಲಸ ಮಾಡುವುದಕ್ಕೆ ತಯಾರಾಗಿರುವಂತಹ ಪಕ್ಷವಾಗಿದೆ. ಈ ಒಂದು ಹಿನ್ನೆಲೆಯಲ್ಲಿ ತಮ್ಮ ಒಂದು ಜವಾಬ್ದಾರಿ ಹೆಚ್ಚಿನದ್ದಾಗಿದೆ. ಈಗಾಗಲೇ ಮಾತನಾಡಿದಂಥ ಶ್ರೀ ಆಚಾರ್ ಅವರು ಸರ್ಕಾರ ರಚನೆ ಮಾಡಲು ನಾವು ಸಹಾಯ ಮಾಡಿದ್ದೇವೆಂಬ ಮಾತನ್ನು ಹೇಳಿದರು. ಇದರ ಜೊತೆಗೆ ಅವರು ಇನ್ನೊಂದು ಮಾತನ್ನು ಸಹ ಹೇಳಿದರು. ಅದೇನೆಂದರೆ, ಅವರ ಪಕ್ಷದವರು ಸರ್ಕಾರದೊಳಗೆ ಇಲ್ಲದಿದ್ದರೂ ಸಹ ಸಮಯ ಬಂದಾಗಲೆಲ್ಲಾ ಅವರ ಅಭಿಪ್ರಾಯಗಳನ್ನು ವ್ಯಕ್ತ ಮಾಡಲು ತಮಗೆ ಹಕ್ಕುಂಟು ಎಂದು ಹೇಳಿದ್ದಾರೆ. ಇದೇ ರೀತಿಯಲ್ಲಿ ಸರ್ಕಾರ ರಚನೆ ಮಾಡಲು ಸಹಾಯ ಮಾಡಿದಂಥ ಬೇರೆ ಕೆಲವು ಪಕ್ಷಗಳು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡುವಂತಹ ಹಕ್ಕನ್ನು ಆರಿಸಿಕೊಂಡಿದ್ದಾರೆ. ಇಂತಹ ಒಂದು ವಿಶಿಷ್ಟ ಸಮಯದಲ್ಲಿ ತಮ್ಮ ಜವಾಬ್ದಾರಿ ಹೆಚ್ಚಾಗಿದೆ ಮತ್ತು ಕಷ್ಟಕರವಾಗಿದೆ. ಮಾನ್ಯ ಸಭಾನಾಯಕರು ಮಾತನಾಡುವಾಗ ತಮ್ಮ ಪೀಠ ಹೂವಿನ ಹಾಸಿಗೆಯಲ್ಲ ಎಂದು ಹೇಳಿದರು. ಅದು ಏನೇ ಇರಲಿ, ಈ ಸಭೆಯ ಘನತೆ ಗೌರವಗಳನ್ನು ಎತ್ತಿಹಿಡಿಯತಕ್ಕಂಥ ಮತ್ತು ಈ ಸಭೆಯ ಕೆಲಸ ಕಾರ್ಯಗಳನ್ನು ನಿರ್ವಹಿಸತಕ್ಕಂಥ ಸಾಮರ್ಥ್ಯ ತಮಗಿದೆ ಎಂಬುದು ನನಗೆ ಗೊತ್ತಿದೆ. ಈ ವಿಚಾರದಲ್ಲಿ ತಾವು ಸಫಲರಾಗುತ್ತೀರಿ ಮತ್ತು ನಮ್ಮೆಲ್ಲರ ಸಹಕಾರ ತಮಗಿದೆ ಎಂದು ನಾನು ಹೇಳುತ್ತಾ ಇವೊತ್ತಿನ ದಿವಸದಿಂದ ನಾವು ಒಂದು ಹೊಸ ಸಭಾ ನಿಯಮಾವಳಿಯನ್ನು ಈ ಹಿಂದೆ ಇದ್ದಂಥ ನಿಯಮಾವಳಿಯನ್ನು ಬದಲಾವಣೆ ಮಾಡುವುದರ ಮೂಲಕ ಜಾರಿಗೆ ತರುತ್ತಿದ್ದೇವೆ. ಈ ಸಭೆಯ ಮಾನ್ಯ ಸದಸ್ಯರಿಗೆ ಹೆಚ್ಚು ಸಹಾಯವಾಗಲಿ ಎಂದು ಈ ಹೊಸ ನಿಯಮಾವಳಿಯನ್ನು ಜಾರಿಗೆ ತರಲಾಗಿದೆ, ಇದನ್ನು ಅನುಚಾನ ವಾಗಿ ಚಾಚೂ ತಪ್ಪದೆ ಜಾರಿಗೆ ತರುವಾಗ ಕೆಲವು ಕಹಿ ಪ್ರಸಂಗಗಳು ಬರಬಹುದು. ಏಕೆಂದರೆ, ನಾನು ಆ ಜಾಗದಲ್ಲಿ ಕೂತು ಕೆಲಸ ಮಾಡುವಾಗಲೂ ಸಹ ಕೆಲವು ಸಂದರ್ಭಗಳಲ್ಲಿ ನಮ್ಮ ಮನಸ್ಸಿಗೆ ವಿರುದ್ಧ ವಾದಂಥ ತೀರ್ಮಾನ ಕೈಕೊಳ್ಳುವ ಪ್ರಸಂಗಗಳು ನಡೆದಿದ್ದು ಉಂಟು. ಇನ್ನು ಮುಂದೆ ಬಹಳಮಟ್ಟಿಗೆ ನಮ್ಮ ಪಕ್ಷ ಆ ತರಹದ ಘಟನೆಗಳಿಗೆ ಅವಕಾಶ ಕೊಡದಂತೆ ನೋಡಿಕೊಳ್ಳುತ್ತದೆ. ಬಹಳಮಟ್ಟಿಗೆ ಈ ಮಾತನ್ನು ಹೇಳುವಾಗ ಜವಾಬ್ದಾರಿಯಿಂದ ಹೇಳುತ್ತೇನೆ. ಏಕೆಂದರೆ, ಇಲ್ಲಿಯವರೆಗೆ ಆಡಳಿತ ನಡೆಸಿ ದಂಥ ಪಕ್ಷವು ಯಾವುದು ಸರಿಯಲ್ಲವೆಂದು ಹೇಳಿತ್ತೋ ಅದನ್ನೇ ಈಗ ಮಾಡಲು ತಯಾರಿಲ್ಲವೆಂಬ ನಂಬಿಕೆ ನನಗಿದೆ. ಬಹಳಮಟ್ಟಿಗೆ ಇಂಥಾದ್ದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಈ ಸಭೆಯ ಸತ್ ಸಂಪ್ರದಾಯಗಳು ಏನಿವೆ ಮತ್ತು ನಿಯಮಾವಳಿಗಳು ಏನಿವೆ ಅವುಗಳಿಗನುಸಾರವಾಗಿ ನಮ್ಮ ಅಭಿಪ್ರಾಯ ಗಳನ್ನು ಸ್ಪಷ್ಟವಾಗಿ ಮತ್ತು ಯಾವ ಅಡ್ಡಿ ಆತಂಕಗಳೂ ಇಲ್ಲದೆ ಹೇಳಲು ತಾವು ಸಹಾಯ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದೇ ಸಂದರ್ಭದಲ್ಲಿ ನಾವೂ ಸಹ ತಮಗೆ ಎಲ್ಲ ರೀತಿಯಿಂದಲೂ ಸಹಕಾರ ನೀಡುತ್ತೇವೆಂದು ಹೇಳಿ ತಾವು ತಮ್ಮ ಕೆಲಸವನ್ನೂ ಹೆಚ್ಚು ಸಮರ್ಥ ರೀತಿಯಿಂದ ಮಾಡಲು ಎಲ್ಲ ಅವಕಾಶಗಳೂ ತಮಗೆ ಸಿಗಲಿ, ಆ ಒಂದು ಶಕ್ತಿ ತಮಗೆ ದೊರೆಯಲ್ಲಿ, ಇದಕ್ಕೆ ನಮ್ಮೆಲ್ಲರ ಸಹಕಾರ ವಿದೆ ಎಂಬ ಮಾತನ್ನು ಹೇಳಿ ಈ ಶುಭ ಕೋರುವುದಕ್ಕೆ ಮತ್ತು ಈ ಎರಡು ಮಾತುಗಳನ್ನು ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ರಾಜ್ಯದಲ್ಲಿ ಹೊಸ ಗಾಳಿ ಬೀಸಿದೆ. ಹಳೆ ಗಾಳಿ ಹೋಗಿ ಹೊಸ ಗಾಳಿ ಬಂದಿದೆ. ಎಲ್ಲರಿಗೂ ಈ ಒಂದು ಅರಿವು ಬಂದಿದೆ. ಯಾರು ಇಲ್ಲಿಯವರೆಗೆ ಆಳುವ ಪಕ್ಷದಲ್ಲಿದ್ದರೋ ಅವರು ಈಗ ವಿರೋಧಪಕ್ಷ ದಲ್ಲಿದ್ದಾರೆ. ಯಾರು ಅನೇಕ ವರ್ಷಗಳಿಂದ ವಿರೋಧಪಕ್ಷದಲ್ಲಿದ್ದರೋ ಅವರು ಆಳುವ ಪಕ್ಷಕ್ಕೆ ಬಂದಿದ್ದಾರೆ. ಈಗ ನಾವು ವಿರೋಧಪಕ್ಷದಲ್ಲಿ ಕುಳಿತಿದ್ದೇವೆ. ಆಳುವ ಪಕ್ಷಕ್ಕೆ ಬೆಂಬಲ ಕೊಡುವ ಜನರು ನಾವು. ನಾನು ಮೊದಲೇ ಹೇಳಿದಂತೆ ಹೊಸ ಗಾಳಿಗೆ ಪ್ರತೀಕವಾಗಿ ಮತ್ತು ಜನತೆಯ ಅಭಿಲಾಷೆ ಯಂತೆ ತಾವು ನಡೆದುಕೊಳ್ಳುತ್ತೀರೆಂದು ನಾನು ನಂಬಿದ್ದೇನೆ. ಈ ಮೊದಲೂ ಸಹ ತಾವು ಶಾಸನಸಭಾ ಸದಸ್ಯರಾಗಿ ಮತ್ತು ಪಾರ್ಲಿಮೆಂಟ್ ಸದಸ್ಯರಾಗಿ ಕೆಲಸ ಮಾಡಿದ ಅನುಭವ ತಮಗಿದೆ. ಈ ಮೊದಲಿನ ಕಹಿ ಅನುಭವದ ಬಗ್ಗೆ ಹೇಳಬೇಕೆಂದರೆ, ವಿಧಾನಸಭಾ ಅಧ್ಯಕ್ಷರಾಗಿ ಆಯ್ಕೆಯಾದವರು ಪಕ್ಷಾತೀತರಾಗಿ ಕೆಲಸ ಮಾಡದೆ ತಾವು ಆರಿಸಿ ಬಂದಂಥ ಪಕ್ಷದ ಪ್ರತಿಷ್ಠೆಯನ್ನು ಎತ್ತಿಹಿಡಿಯುವಂತಹ ಕೆಲಸ ಮಾಡಿದ್ದು

ನಮಗೆ ಕಂಡುಬಂದಿದೆ. ಪ್ರಜಾಪ್ರಭುತ್ವದ ಪದ್ಧತಿಗನುಸಾರವಾಗಿ ಈ ರೀತಿ ನಡೆದುಕೊಳ್ಳುವುದು ಸರಿಯಾದ ಕ್ರಮವಲ್ಲ. ಈ ಮೊದಲು ತಾವು ಒಂದು ಪಕ್ಷಕ್ಕೆ ಸೇರಿದ ಸದಸ್ಯರಾಗಿದ್ದೀರಿ. ಆದರೆ ತಾವು ಈಗಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಪಕ್ಷಾತೀತರಾಗಿನಡೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನೊಂದು ಅಂಶವೆಂದರೆ, ನಮ್ಮ ಸ್ನೇಹಿತರು ಹೇಳಿದಂತೆ ಮತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದಂತೆ ತಮ್ಮ ಮುಂದೆ ಅನೇಕ ಸಮಸ್ಯೆಗಳು ಬರುತ್ತವೆ. ಆ ಸಂದರ್ಭದಲ್ಲಿ ಆ ಸಮಸ್ಯೆಗಳನ್ನು ತಾವು ಯಾವ ರೀತಿ ಬಗೆ ಹರಿಸುತ್ತೀರಿಮತ್ತು ಯಾವ ತೀರ್ಮಾನಕೊಡುತ್ತೀರಿ ಎಂಬುದು ಮುಖ್ಯವಾದಂಥ ವಿಷಯ. ಈಮೊದಲು ಕೆಲವು ಕಹಿ ವಾತಾವರಣ ಉಂಟಾದಾಗ ನಾವು ನಮ್ಮ ಜಾಗದಿಂದ ಎದ್ದು ಹೋಗಿ ಈ ಸಭೆಯ ಮಧ್ಯ ದಲ್ಲಿ ಕುಳಿತುಕೊಳ್ಳುವಂತಹ ಸಂದರ್ಭಗಳು ಬಂದಾಗ ಆಗಿನ ಅಧ್ಯಕ್ಷರು ನಮಗೆ ಛೀಮಾರಿ ಹಾಕಿದ್ದೂ ಉಂಟು ಮತ್ತು ಸಭೆಯಿಂದ ಹೊರಗಡೆಗೆ ಎತ್ತಿ ಹಾಕಿಸುವುದಾಗಿ ಹೇಳಿದ್ದೂ ಉಂಟು. ಮತ್ತೆ ಕೆಲವು ಸಂದರ್ಭಗಳಲ್ಲಿ ಸಸ್ಪೆಂಡ್ ಮಾಡುವುದಾಗಿ ಹೇಳಿ ಅದರಂತೆ ಮಾಡಿದ್ದೂ ಉಂಟು. ಇನ್ನು ಮುಂದೆ ಈ ರೀತಿಯೆಲ್ಲಾ ಆಗದಂತೆ ನೋಡಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ಪ್ರಸಂಗಗಳು ತಮ್ಮ ಕೈಯಿಂದ ಆಗುತ್ತದೆಂದು ನಾನು ನಂಬಿಲ್ಲ. ಇಂತಹ ಪ್ರಸಂಗಗಳು ಆಗದಂತೆ ನೋಡಿಕೊಳ್ಳು ವುದು ಸರ್ಕಾರಕ್ಕೆ ಸೇರಿದ್ದು. ಆದ್ದರಿಂದ ಇದು ಸರ್ಕಾರದ ನೀತಿ ಮತ್ತು ಧೋರಣೆಯನ್ನು ಅವಲಂಬಿಸಿದೆ. ಸರ್ಕಾರದ ನೀತಿ ಮತ್ತು ಧೋರಣೆ ಏನಿದ್ದರೂ ಸಾಮಾನ್ಯ ಜನರ ಮತ್ತು ಮಧ್ಯಮ ವರ್ಗದವರ ಹಿತರಕ್ಷಣೆ ಮಾಡುವಂತಿರಬೇಕು. ಇದಕ್ಕೆ ವಿರುದ್ಧವಾದಂಥ ಪ್ರಸಂಗಗಳು ಬರಲಾರದೆಂದು ನಾನು ನಂಬಿದ್ದೇನೆ. ಎಂತಹ ಸಂದರ್ಭದಲ್ಲಿಯೂ ತಾವು ಇಲ್ಲಿ ಕಹಿ ವಾತಾವರಣ ಮತ್ತು ಸನ್ನಿವೇಶ ಬರದಂತೆ ನೋಡಿಕೊಳ್ಳುತ್ತೀರೆಂದು ನಾನು ನಂಬಿದ್ದೇನೆ. ಹೆಚ್ಚು ಅನುಭವವಿರುವಂತಹ ವ್ಯಕ್ತಿ ತಾವು ಎಂಬುದು ನನಗೆ ಗೊತ್ತು. ನಾನು ತಮ್ಮನ್ನು ಅನೇಕ ವರ್ಷಗಳಿಂದ ಬಲ್ಲೆ. ತಾವು ಮಂತ್ರಿಗಳಾಗಿಯೂ ಸಹ ಕೆಲಸ ಮಾಡಿದ್ದೀರಿ. ತಮ್ಮ ಲೋಕಸಭಾ ಸದಸ್ಯತ್ವವನ್ನು ಶ್ರೀಮತಿ ಇಂದಿರಾಗಾಂಧಿಯವರಿಗಾಗಿ ತ್ಯಾಗ ಮಾಡುವುದರ ಮೂಲಕ ಕರ್ನಾಟಕ ರಾಜ್ಯದ ಹೆಸರು ಭಾರತದ ಚರಿತ್ರೆಯಲ್ಲಿ ಬಹಳ ಕಾಲ ಇರುವಂತಹ ಕೆಲಸ ಮಾಡಿದ ವ್ಯಕ್ತಿ ತಾವಾಗಿದ್ದೀರಿ. ತಮ್ಮಲ್ಲಿ ತ್ಯಾಗ ಮಾಡುವಂತಹ ಮನೋಭಾವವೂ ಇದೆ. ಆದ್ದರಿಂದ ತಾವು ಕೆಲವು ಸಂದರ್ಭಗಳು ಮತ್ತು ಕೆಲವು ಸನ್ನಿವೇಶಗಳು ಬಂದಾಗ ನಮ್ಮ ಒಂದು ಪರಿಸ್ಥಿತಿಗೆ ಹೊಂದುವಂತಹ ತೀರ್ಪು ಕೊಡುತ್ತೀರೆಂದು ನಾನು ನಂಬಿದ್ದೇನೆ. ಈ ರೀತಿ ಮಾಡದೆ ತಾವು ಮೇಸ್-ಪಾರ್ಲಿಮೆಂಟರಿ ಪ್ರಾಕ್ಟೀಸ್‌ನಲ್ಲಿ ಈ ರೀತಿ ಹೇಳಿದ್ದಾರೆ ಮತ್ತು ಹೌಸ್-ಆಫ್-ಕಾಮನ್ಸ್ ನಲ್ಲಿ ಈ ರೀತಿ ಹೇಳಿದ್ದಾರೆ, ಅದೇರೀತಿ ನಾವೂ ನಡೆದುಕೊಳ್ಳಬೇಕೆಂದರೆ ಅದು ಸರಿಯೋಗುವುದಿಲ್ಲ. ಈ ಕಾರಣದಿಂದ ತಾವು ನಮ್ಮ ದೇಶದ ಪ್ರಜಾಪ್ರಭುತ್ವ ರೀತಿಯಲ್ಲಿ ಮತ್ತು ನಮ್ಮ ಒಂದು ಪರಿಸ್ಥಿತಿಗೆ ತಕ್ಕಂತೆ ತೀರ್ಪು ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಅಷ್ಟು ಮಾತ್ರವಲ್ಲ, ತಮಗೆ ಗೊತ್ತಿರುವಂತೆ ಕರ್ನಾಟಕ ರಾಜ್ಯ ಬಹಳ ವರ್ಷಗಳಿಂದ ಬಹಳ ಒಳ್ಳೆಯ ಅಧ್ಯಕ್ಷರುಗಳನ್ನು ಪಡೆದು ಕೊಂಡಿದೆ. ಅದರಲ್ಲಿಯೂ ಶ್ರೀಮಾನ್ ಬಾಳಿಗಾ ಅವರನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳಬೇಕು. ಅವರು ಕೊಟ್ಟಂತಹ ಒಳ್ಳೆಯ ರೂಲಿಂಗ್‌ಗಳು ಈ ಸಂದರ್ಭದಲ್ಲಿ ಜ್ಞಾಪಕಕ್ಕೆ ಬರುತ್ತವೆ. ತಾವು ಸಹ ಈ ಪರಂಪರೆಯಲ್ಲಿ ಮುನ್ನಡೆದು ಸರಿಯಾದಂತಹ ರೂಲಿಂಗ್‌ಗಳನ್ನು ಕೊಡಬೇಕು. ಪ್ರತಿಯೊಂದು ಸಂದರ್ಭದಲ್ಲಿಯೂ ಪಕ್ಷಾತೀತವಾಗಿ, ಜನಹಿತ ಸಾಧನೆಯಾಗುವ ರೀತಿಯಲ್ಲಿ ತೀರ್ಪು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ಶಕ್ತಿ ಸಾಮರ್ಥ್ಯ ತಮ್ಮಲ್ಲಿದೆ ಎಂದು ನನ್ನ ಭಾವನೆ.

ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ಮಾನ್ಯ ಸ್ನೇಹಿತರಾದ ಶ್ರೀಮಾನ್ ಆಚಾರ್ಯ ಅವರು ಭಾರತೀಯ ಜನತಾಪಕ್ಷದ ಪರವಾಗಿ ಹೇಳಿದಂತೆ, ನಾನು ಕಮ್ಯುನಿಸ್ಟ್ ಪಕ್ಷದ ವತಿಯಿಂದ ಹೇಳುತ್ತೇನೆ. ಈ ದಿವಸ ಆಡಳಿತ ಪಕ್ಷಕ್ಕೆ ನಾವು ಪೂರ್ತಿಯಾಗಿ ಬೆಂಬಲವನ್ನು ಕೊಟ್ಟಿ ದ್ದೇವೆ. ಸರ್ಕಾರದ ರಚನೆ ಮಾಡುವುದಕ್ಕೆ ಬೆಂಬಲ ಕೊಟ್ಟಿದ್ದೇವೆ. ಈ ಸರ್ಕಾರ ಏನೇನು ಒಳ್ಳೆಯ ಕೆಲಸಗಳನ್ನು ಮಾಡುತ್ತದೋ, ಅವೆಲ್ಲಕ್ಕೂ ನಾವು ಬೆಂಬಲ ಕೊಡುತ್ತೇವೆ. ಅದೇ ರೀತಿಯಲ್ಲಿ ಈ ಸರ್ಕಾರವನ್ನು ಉರುಳಿಸುವುದಕ್ಕೆ ಪಿತೂರಿ ನಡೆಸಿದರೆ ಅದನ್ನು ವಿರೋಧಿಸುತ್ತೇವೆ. ಮತ್ತು ಉಳಿಸುವ ಹಾಗೆ ಮಾಡುತ್ತೇವೆ. ಐದಾರು ವರ್ಷಗಳ ಕಾಲ ಚೆನ್ನಾಗಿ ಸರ್ಕಾರವನ್ನು ನಡೆಸಿಕೊಂಡು ಹೋದರೆ ಮಾತ್ರ ಜನಹಿತ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತದೆ. ನಾನು ಪರಂಪರೆ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಎಲ್ಲರಿಗೂ ಒಂದೇ ವಿಧವಾದ ಪರಂಪರೆ ಅನ್ವಯಿಸಬೇಕು. ಅಷ್ಟು ಮಾತ್ರ ಹೇಳುತ್ತೇನೆ. ಈ ರೀತಿಯಾಗಿ ವರ್ತಿಸುವ ಶಕ್ತಿ ಸಾಮರ್ಥ್ಯ ತಮಗೆ ದೊರೆಯಲಿ ಎಂದು

ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಸೂರ್ಯನಾರಾಯಣರಾವ್ (ವರ್ತೂರು).—ಮಾನ್ಯ ಸಭಾಧ್ಯಕ್ಷರೇ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದವತಿಯಿಂದ ಇದೀಗ ಮೊದಲ ಸಲ ಈ ಸದನಕ್ಕೆ ನಾನು ಬಂದಿದ್ದೇನೆ. ನಾನು ಈ ಸದನದ ಪರಂಪರೆ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತನ್ನು ಮಾತ್ರ ಹೇಳುತ್ತೇನೆ. ಅದೇನೆಂದರೆ ಈ ಶಾಸನಸಭೆ ಇರುವುದು ಕರ್ನಾಟಕದ ಜನತೆಯ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಎನ್ನುವುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ನಾವೀಗ ಒಂದು ವಿಶೇಷವಾದ ನಿರೀಕ್ಷೆಯಲ್ಲಿ ಬಂದಿದ್ದೇವೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಿತ್ತುಹಾಕುವ ಪ್ರವೃತ್ತಿಯನ್ನು ಹೋಗಲಾಡಿಸುವ ಕಾರಣಕ್ಕಾಗಿ ಆಳುವ ಪಕ್ಷಕ್ಕೆ ನಾವು ಬೆಂಬಲವನ್ನು ಕೊಟ್ಟಿದ್ದೇವೆ, ಕೇಂದ್ರದಲ್ಲಿ ಇನ್ನೂ ಈ ಪ್ರವೃತ್ತಿ ಇದೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಉಳಿಸುವಲ್ಲಿ ಅರಿವನ್ನು ಎಲ್ಲರಲ್ಲಿ ಉಂಟುಮಾಡುವ ಪ್ರಯತ್ನವನ್ನು ತಾವು ಇಲ್ಲಿ ಮಾಡುತ್ತೀರೆಂದು ನಾನು ತಿಳಿದು ಕೊಂಡಿದ್ದೇನೆ. ಏತಕ್ಕೆಂದರೆ ಈ ಸದನದಲ್ಲಿ ಹಿಂದೆ ಅನೇಕ ಬೇರೆ ಬೇರೆ ಸಂದರ್ಭಗಳಲ್ಲಿ ಜನತೆಯ ಮೇಲೆ ಹಲ್ಲೆಗಳು ನಡೆದಾಗ, ಜನತೆಯ ಮೇಲೆ ಗೋಲಿಬಾರ್ ನಡೆದಾಗ, ಜನತೆಯ ಕಗ್ಗೊಲೆಗಳು ನಡೆದಾಗ ಈ ಪ್ರಶ್ನೆಗಳು ಇಲ್ಲಿ ಬಂದು ಆ ಸಂಬಂಧವಾಗಿ ಚರ್ಚೆ ನಡೆದಾಗ ಆತುರಾತುರವಾಗಿ ಮಸೂದೆಗಳನ್ನು ಅಂಗೀಕಾರ ಮಾಡಿದ್ದನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆದ್ದರಿಂದ ತಾವು ಈವಾಗ ಇಂಥಾದ್ದಕ್ಕೆಲ್ಲಾ ಆಸ್ಪದ ಕೊಡಬಾರದು ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಬದಲಾವಣೆ ಕರ್ನಾಟಕದಲ್ಲಿ ಆಗಬೇಕು. ಈ ಒಂದು ದೊಡ್ಡ ಜವಾಬ್ದಾರಿ ವಿರೋಧಪಕ್ಷದವರ ಮೇಲೂ ಇದೆ. ಏಕೆಂದರೆ ಹರಿಯಾಣ ರೀತಿಯ ಸರ್ಕಾರ ಇಲ್ಲಿ ಬರಬೇಕೆಂದು ಕುಟಿಲ ಪ್ರಯತ್ನಗಳು ನಡೆದಿವೆಯೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಇವತ್ತು ಜನತೆಯ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಬೇಕು. ಹಿಂದುಳಿದ ವರ್ಗಗಳ ಕ್ಷೇಮಾಭ್ಯುದಯ ಆಗಬೇಕೆಂದು ನಾವು ಹೇಳುವಾಗ ಈ ದೇಶದ ಸಮಗ್ರತೆಯನ್ನು ಕಾಪಾಡಿಕೊಳ್ಳುವ ದೊಡ್ಡ ಜವಾಬ್ದಾರಿ ನಮ್ಮ ಮೇಲೆ ಇದೆ. ಕರ್ನಾಟಕದ ಜನತೆ ಆರಿಸಿ ಕಳಿಸಿರುವ ಎಲ್ಲಾ ಸದಸ್ಯರೂ ಈ ಸಮಗ್ರತೆಯನ್ನು ಕಾಪಾಡಿಕೊಳ್ಳತಕ್ಕಂಥ ದಿಸೆಯಲ್ಲಿ ಕೆಲಸ ಮಾಡಬೇಕೇ ವಿನಹ ಸಮಗ್ರತೆಯನ್ನು ಕಿತ್ತುಹಾಕತಕ್ಕಂಥ ವಿಚ್ಛಿದ್ರಕಾರಿ ಶಕ್ತಿಗಳಿಗೆ ಬೆಂಬಲ ಕೊಡುವಂತಹ ಕೆಲಸವನ್ನು ಯಾವ ಸದಸ್ಯರೂ ಮಾಡಬಾರದು. ಹಾಗೆ ಯಾರೂ ಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ನಾನು ಹೊಂದಿದವನಾಗಿದ್ದೇನೆ. ಇಂದು ತಾವು ರೈತರ ಮುಖಂಡರಾಗಿದ್ದೀರಿ. ರೈತರ ಸಮಸ್ಯೆಗಳನ್ನು ಅರಿತುಕೊಂಡಿದ್ದೀರಿ. ಶಾಸನಸಭೆಯಲ್ಲಿ ಪಾರ್ಲಿಮೆಂಟಿನಲ್ಲಿ ಇದ್ದವರಾಗಿದ್ದೀರಿ. ತಾವು ಒಂದು ರೀತಿಯಲ್ಲಿ ಯುವಕರೂ ಅಲ್ಲ, ಮುದುಕರೂ ಅಲ್ಲ. ಸರಿಯಾದ ಪ್ರಾಪ್ತ ವಯಸ್ಕರಾಗಿದ್ದೀರಿ. ಈ ವಿಚಾರದಲ್ಲಿ ತಾಳ್ಮೆಯಿಂದ, ಯಾವುದೇ ಬಗೆಯ ಪಕ್ಷಪಾತವಿಲ್ಲದೆ ತಾವು ವರ್ತಿಸಬೇಕು. ತಮ್ಮ ಪಕ್ಷದವರು ಎಂಬ ಬೇಧಭಾವ ತಮಗೆ ಇರಬಾರದು. ಜನತೆ ಕರ್ನಾಟಕದಲ್ಲಿ ಬದಲಿ ಸರ್ಕಾರ, ಮೊದಲನೇ ಸಲ ಬರಲಿ ಎಂದು ಆಸೆಯನ್ನು ಇಟ್ಟುಕೊಂಡಿರುವುದರಿಂದ ನಾವು ಸಹ ಈ ಸರ್ಕಾರಕ್ಕೆ ಬೆಂಬಲವನ್ನು ಕೊಟ್ಟಿದ್ದೇವೆ. ಇಲ್ಲಿ ಎಲ್ಲರೂ ಒಂದೇ ಪ್ರವೃತ್ತಿಯನ್ನು ಇಟ್ಟುಕೊಂಡು ಬಂದಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಎಲ್ಲಾ ವರ್ಗದ ಆಶೋತ್ತರಗಳನ್ನು ಪ್ರತಿಬಿಂಬಿಸತಕ್ಕ ರೈತರ ಕಾರ್ಮಿಕರ ಹಿತದೃಷ್ಟಿಯಿಂದ ರೈತಕಾರ್ಮಿಕರ ಪಕ್ಷವಾಗಿರುವ ನಮ್ಮ ಪಕ್ಷದ ಬಗ್ಗೆ ತಾವು ಹೆಚ್ಚಿನ ರಿಯಾಯಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ದುರ್ಬಲವರ್ಗಗಳನ್ನು ಪ್ರತಿನಿಧಿಸುವ ನಮ್ಮ ಪಕ್ಷಕ್ಕೆ ಸ್ವಲ್ಪ ಹೆಚ್ಚು ವೆಯ್‌ಟೇಜ್ ಕೊಡಬೇಕೆಂಬುದು ನನ್ನ ಕೋರಿಕೆ. ತಾವು ಈ ಸದನದ ಘನತೆ ಗೌರವಗಳನ್ನು ಎತ್ತಿ ಹಿಡಿದು ಜನತೆಯ ಆಶೋತ್ತರಗಳನ್ನು ಈಡೇರಿಸುವ ಮುಖಾಂತರ, ಹಾಗೂ ಜನತೆಯ ಸಂಕಷ್ಟಗಳನ್ನು ನಿವಾರಣೆ ಮಾಡುವ ಮುಖಾಂತರ ಈ ಸಭೆಯು ಹೊಸ ಪರಂಪರೆಯನ್ನು ಮೂಡಿಸಿ ಹೊಸ ಹಾದಿಯಲ್ಲಿ ಹೋಗಲಿ ಎಂದು ಹಾರೈಸಿ, ಈ ಒಂದು ಕೆಲಸದಲ್ಲಿ ನಮ್ಮ ಪಕ್ಷದ ಪರವಾಗಿ ಎಲ್ಲಾ ಸಹಕಾರ ನೀಡುತ್ತೇವೆ ಎಂದು ಹೇಳಿ ನನ್ನ ಮಾತಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಮದೇವ್ (ಮಲ್ಲೇಶ್ವರಂ).—ಮಾನ್ಯ ಸಭಾಧ್ಯಕ್ಷರೇ ಮೊದಲನೆಯದಾಗಿ ತಮಗೆ ನನ್ನ ಶುಭಾಶಯಗಳನ್ನು ಅರ್ಪಿಸುತ್ತೇನೆ. ಐದು ವರ್ಷಗಳ ಅನುಭವದ ಹಿನ್ನೆಲೆಯಲ್ಲಿ ಒಂದೆರಡು ಮಾತಗಳನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ತಾವು ಈ ಸಭೆಯಲ್ಲಿ ಸದಸ್ಯರ ಹಕ್ಕುಭಾದ್ಯತೆಗಳನ್ನು ಎತ್ತಿಹಿಡಿಯುವುದರಲ್ಲಿ ಗಮನಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ. ನನ್ನ ಹಿಂದಿನ

ಅನುಭವದಿಂದ ಹೇಳಬೇಕಾದರೆ, ಸದಸ್ಯರು ಸಭೆಗೆಂದು ಬರುವಾಗ ದಸ್ತಗಿರಿ ಮಾಡಿರತಕ್ಕಂತಾದ್ದು ಕೆಲವರನ್ನು ಚಿತ್ರಹಿಂಸೆಗೆ ಗುರಿಮಾಡಿರುವುದು ಮೊದಲಾದ ಪ್ರಸಂಗಗಳು ನಡೆದಿವೆ. ಆದ್ದರಿಂದ ಸದಸ್ಯರ ಹಿತ ರಕ್ಷಣೆ ಬಗ್ಗೆ ತಾವು ಹೆಚ್ಚಿನ ಕಾಳಜಿ ವಹಿಸಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಸ್ವಾಮಿ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ಒಂದು ಮಾತನ್ನಾಡಿದರು. ಅವರು ಹತ್ತು ವರ್ಷಗಳ ಕಾಲ ಮಂತ್ರಿಗಳಾಗಿ ಆಡಳಿತದ ಅನುಭವವನ್ನು ಹೊಂದಿರತಕ್ಕಂಥವರು ವಿರೋಧ ಪಕ್ಷದವರ ಎಲ್ಲಾ ವಿಚಾರಗಳೂ ಕಹಿಸಿಹಿ ಉಂಡವರಾಗಿ ಅವರಿಗೆ ಚೆನ್ನಾಗಿ ಗೊತ್ತಿರುವುದರಿಂದ ಈವೊತ್ತಿನ ದಿವಸ ವಿರೋಧಪಕ್ಷದ ನಾಯಕರಾಗಿ ಅವರು ಒಳ್ಳೆಯ ಮಾರ್ಗದರ್ಶನ ಹಾಕಿಕೊಡುತ್ತಾರೆಂದು ನಾನು ಭಾವಿಸುತ್ತೇನೆ. ಇಂದು ಜನತೆಯ ನಿರೀಕ್ಷೆ ಹೆಚ್ಚಿನದಾಗಿದೆ. ಜನತೆ ಯಾವ ನಿರೀಕ್ಷೆಯನ್ನು ಸರ್ಕಾರದ ಮೇಲೆ ಇಟ್ಟಿದೆಯೋ ಅದೇ ನಿರೀಕ್ಷೆಯನ್ನು ವಿರೋಧಪಕ್ಷದ ಮೇಲೂ ಕೂಡ ಇಟ್ಟಿದೆ. ಅದೇ ನಿರೀಕ್ಷೆಯಿಂದ ಜನತೆ ಈ ವಿಧಾನ ಮಂಡಲವನ್ನು ಕೂಡ ನೋಡುತ್ತದೆ. ಇದು ಹುಸಿಯಾಗಬಾರದು. ಮತ್ತೊಂದುಮಾತನ್ನು ಹೇಳಬೇಕೆಂದರೆ ತಮ್ಮ ಕಾಲದಲ್ಲಿ ಲೆಜಿಸ್ಲೇಚರ್ ಸೆಕ್ರೆಟರಿಯೇಟ್ ಪೂರ್ಣವಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ವ್ಯವಸ್ಥೆ ಮಾಡಬೇಕು. ಅಷ್ಟೇ ಅಲ್ಲ ಅದು Independent of the Government ಆಗಬೇಕು. ಮತ್ತು ನನ್ನ ಅನುಭವದಲ್ಲಿ ಹೇಳಬೇಕಾದರೆ ಕಳೆದ ನಾಲ್ಕು–ಐದು–ಹತ್ತು ವರ್ಷಗಳಿಂದ ಸದಸ್ಯರು ಕಳಿಸಿಕೊಟ್ಟ ಪ್ರಶ್ನೆಗಳು ಹಾಗೆಯೇ ಉಳಿದಿವೆ. ತಾವು ಸರ್ಕಾರದ ಮೇಲೆ ಹತೋಟಿಯನ್ನು ಇಟ್ಟುಕೊಂಡು ಅವುಗಳಿಗೆಲ್ಲಾ ಉತ್ತರ ಸಿಗುವಂತೆ ಮಾಡಬೇಕು. ಹಿಂದೆ ಇಲ್ಲಿ ಸಭೆ ನಡೆಯುವಾಗಹೊರಗೆ ಪೋಲೀಸ್‌ನವರು ಒಳಗೆ ಪ್ರವೇಶಿಸಲು ನಿರ್ಬಂಧವನ್ನುಂಟು ಮಾಡಿದ್ದಾರೆ. ಹಿಂದೆ ಈ ಬಗ್ಗೆ ನಾವು ಅನೇಕ ಬಾರಿ ವಿರೋಧವನ್ನು ವ್ಯಕ್ತಪಡಿಸಿದ್ದೇವೆ. ಪೋಲೀಸ್ ರಕ್ಷಣೆ ಈಗ ನಮಗೆ ಬೇಕಾಗಿಲ್ಲ. ಇಂತಹ ನಿರ್ಬಂಧಗಳು ಮುಂದೆ ಆಗದಹಾಗೆ ತಾವು ಗಮನದಲ್ಲಿಟ್ಟುಕೊಂಡು ಸಂಬಂಧಪಟ್ಟವರಿಗೆ ಸೂಚನೆ ಕೊಡಬೇಕು. ಕೊನೆಯ ದಾಗಿ ಹೇಳಬೇಕೆಂದರೆ ಇಲ್ಲಿ ಯಾರಿಗೂ ಸೀನಿಯರ್ ಮೆಂಬರ್ ಅಥವಾ ಜೂನಿಯರ್ ಮೆಂಬರ್ ಎಂದು ತಾರತಮ್ಯ ಇಟ್ಟುಕೊಳ್ಳುವುದು ಬೇಡ. ಪ್ರತಿಯೊಬ್ಬ ಸದಸ್ಯರನ್ನೂ ಜನರು ಆರಿಸಿ ಇಲ್ಲಿಗೆ ಕಳಿಸಿದ್ದಾರೆ ಸೀನಿಯಾರಿಟಿ ಮೇಲೆಜನರು ಯಾರನ್ನೂ ಆರಿಸಿ ಕಳಿಸಿಲ್ಲ. ಆದುದರಿಂದ ಎಲ್ಲರಿಗೂಸಮಾನವಾದ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ತಮ್ಮ ಅಧಿಕಾರ ಅವಧಿ ಐದು ವರ್ಷ ಕಾಲ ಇರುತ್ತದೆ. ಈ ಸರ್ಕಾರವೂ ಇರುತ್ತದೆ. ಈ ಅವಧಿಯಲ್ಲಿ ಅತ್ಯುತ್ತಮವಾದ ಹೊಸ ಸಂಪ್ರದಾಯವನ್ನು ತಾವು ಹಾಕಿಕೊಂಡು ಈ ಸರ್ಕಾರ ಮುನ್ನಡೆಯಲಿ ಎಂದು ಹಾರೈಸುತ್ತೇನೆ ಮತ್ತೊಮ್ಮೆ ತಮಗೆ ಶುಭಾಶಯಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜೆ. ಹೆಚ್. ಪಟೇಲ್ (ಚೆನ್ನಗಿರಿ).—ಸ್ವಾಮಿ ಅಧ್ಯಕ್ಷರೆ ಮಾನ್ಯ ಸದನದ ನಾಯಕರು ಹಾಗೂ ಮಾನ್ಯ ವಿರೋಧಪಕ್ಷದ ನಾಯಕರು ಹಾಗೂ ಇತರೆ ಸನ್ಮಾನ್ಯ ಸದಸ್ಯರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯಗಳನ್ನು ನಾನು ಅನುಮೋದಿಸುತ್ತಾ, ನನ್ನ ಒಂದು ಸಣ್ಣ ಅನುಭವವನ್ನು ಈ ಸಂದರ್ಭದಲ್ಲಿ ತಮ್ಮ ಎದುರಿನಲ್ಲಿ ಹೇಳುವುದು ಉಚಿತ ಎಂದು ಭಾವಿಸಿ, ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಹೌಸ್ ಆಫ್ ಕಾಮನ್ಸ್‌ನ್ನು ವೀಕ್ಷಣೆ ಮಾಡಿದ್ದೇನೆ ಮತ್ತು ಲೋಕಸಭಾ ಸದಸ್ಯನಾಗಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡುವುದಲ್ಲ, ಪೂರ್ಣ ಕನ್ನಡದಲ್ಲಿ ನನ್ನ ವ್ಯವಹಾರವನ್ನು ಲೋಕಸಭೆಯಲ್ಲಿ ನಡೆಸಿದೆ. ಆಗ ಅಲ್ಲಿನ ಜನ ನನ್ನ ಕನ್ನಡವನ್ನು ಸಹಿಸದೆ ತಕರಾರು ಮಾಡಿದರು. ಆಗ ನನ್ನ ಮಾತೃ ಭಾಷೆಯಲ್ಲಿ ವ್ಯವಹರಿಸಲು ನನಗೆ ಹಕ್ಕಿದೆ, ಅಧ್ಯಕ್ಷರ ನಿಯಮಾವಳಿಗಳಲ್ಲಿ ಹಕ್ಕಿಲ್ಲದೇ ಹೋದರೂ ರಾಜ್ಯಾಂಗದ ಪ್ರಕಾರ ಮಾತೃಭಾಷೆಯಲ್ಲಿ ವ್ಯವಹರಿಸಲು ಹಕ್ಕಿದೆ ಎಂದು ಸಾಧಿಸಿ ನನ್ನ ಮಾತೃಭಾಷೆಯಾದ ಕನ್ನಡವನು ಲೋಕಸಭೆಯಲ್ಲಿ ಸ್ಥಾಪನೆ ಮಾಡಿದ ವಿಷಯ ತಮಗೆ ಗೊತ್ತಿದೆ. ಅದೇ ರೀತಿ ಪ್ರತಿಯೊಬ್ಬರ ಮಾತೃಭಾಷೆಯನ್ನು ಗೌರವಿಸಬೇಕಾದುದು ಸೂಕ್ತವೆಂದು ಸದನದ ನಾಯಕರು ಹೇಳಿದ್ದಾರೆ. ಅದನ್ನೇ ನಾನು ಮತ್ತೊಮ್ಮೆ ಹೇಳುತ್ತೇನೆ. ಇಷ್ಟು ಹೇಳುವಾಗ ಕರ್ನಾಟಕದ ಜನರ ಆಶಯಗಳನ್ನು ಗೌರವಿಸಬೇಕಾದುದು ಎಂದು ಸದಸ್ಯರು ಭಾವಿಸಬೇಕಾದುದು ಅವಶ್ಯಕ. ಇಲ್ಲಿ ಈ ಒಂದು ಘಟನೆ ಆದದ್ದರ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇಂತಹ ಘಟನೆಗಳು ನಡೆಯಬಾರದು. ಇಂತಹ ಘಟನೆಗಳು ವಿಧಾನಸಭೆಯಲ್ಲಿ ನಡೆಯುವುದಕ್ಕೆ

ಪ್ರಾರಂಭವಾದರೆ ಹೊರಗಡೆ ಯಾವ ಶಿಸ್ತು ಇರುತ್ತದೆ ಎನ್ನುವುದನ್ನು ನಾವು ಆಲೋಚನೆ ಮಾಡಬೇಕು. ಶಿಸ್ತು ಮತ್ತು ಗಾಂಭೀರ್ಯ ಅಬ್ಸಲ್ಯೂಟ್ ಅಲ್ಲ. ಇದನ್ನು ನಾವು ಒಂದನ್ನೊಂದು ಹೋಲಿಸಿ ನೋಡುತ್ತೇವೆ. ಯಾವ ಸಮಾಜದಲ್ಲಿ ಶಿಸ್ತು ಮತ್ತು ಗಾಂಭೀರ್ಯ ಇರುತ್ತದೋ, ಯಾವ ಸಮಾಜದಲ್ಲಿ ಶಾಂತಿ ಮತ್ತು ಶಿಸ್ತು ಇರುತ್ತದೋ, ನೋವು, ಸಂಕಟ ಕಡಿಮೆ ಇರುತ್ತದೋ ಆ ಸಮಾಜವನ್ನು ಪ್ರತಿನಿಧಿಸಿರತಕ್ಕ ಸಭೆಯಲ್ಲಿ ಶಿಸ್ತು ಇರುತ್ತದೆ. ಯಾವ ಸಮಾಜದಲ್ಲಿ ನೋವು, ಸಂಕಟ, ಹಿಂಸೆ, ಅತ್ಯಾಚಾರವಿರುತ್ತದೋ ಅಂಥಾ ಸಮಾಜವನ್ನು ಪ್ರತಿನಿಧಿಸಿರತಕ್ಕ ಸಭೆಯಲ್ಲಿ ಶಿಸ್ತು ತರುವುದು ಕಷ್ಟ. ಇದು ತಮಗೂ ಗೊತ್ತು. ನಾನು ಲೋಕಸಭೆಯ ಸದಸ್ಯನಾಗಿದ್ದಾಗ ಇದ್ದಂಥ ಗಾಂಭೀರ್ಯ, ರೀತಿನೀತಿಗಳು ಇವತ್ತಿನ ಲೋಕಸಭೆಯಲ್ಲಿ ಇಲ್ಲ. ಆಗಿದ್ದಂಥ ಅಧ್ಯಕ್ಷರು ಶ್ರೀಮಾನ್ ಸಂಜೀವರೆಡ್ಡಿಯವರು, ಮಾಜಿ ರಾಷ್ಟ್ರಪತಿಯವರು, ಅವರು ಮಹಾನ್ ವಿದ್ವಾಂಸರೇನಲ್ಲ, ಅವರಿಗಿಂತ ಮಾವಳಂಕರ್‌ರವರ ತೀರ್ಪುಗಳನ್ನು ನಾವು ಓದಿದ್ದೇವೆ. ಆದರೆ ಶ್ರೀಮಾನ್ ಸಂಜೀವರೆಡ್ಡಿಯವರು ಬರೀ ಪುಸ್ತಕಗಳನ್ನು ಓದದೇ ಹೋದರೂ ಜೀವನವನ್ನು ಅರ್ಥ ಮಾಡಿಕೊಂಡು ಶ್ರೀಮಂತ ಅನುಭವದ ವ್ಯಕ್ತಿಯಾಗಿದ್ದರು. ಆಗ ಲೋಕಸಭೆಯಲ್ಲಿ ನಾವು ಸರಿಸಮಾನರಾಗಿದ್ದೆವು. ೨೮೦ ಆಳುವ ಪಕ್ಷದ ಸದಸ್ಯರಿದ್ದರು, ೨೪೦ ಸದಸ್ಯರು ನಾವು ಇದ್ದೆವು. ಅಂಥಾ ಕಾಲದಲ್ಲೂ ಸಭೆಯನ್ನು ಬಹಳ ಗಾಂಭೀರ್ಯವಾಗಿ ನಡೆಸಿಕೊಂಡು ಹೋಗತಕ್ಕ ಅನುಭವ ಮತ್ತು ಜನರ ನೋವಿನ ಬಗ್ಗೆ ಅನುಕಂಪ ಇತ್ತು. ನಾನು ತಮ್ಮನ್ನು ಹತ್ತಿರವಾಗಿ ಬಲ್ಲೆ. ಈ ಸಮಯದಲ್ಲಿ ನಾನು ತಮ್ಮನ್ನು ಗುಣಗಾನ ಮಾಡಿದರೆ ಅದು ನಾಟಕೀಯವಾಗಿ ಕಾಣಬಹುದು. ತಾವು ಸಮಾಜವಾದೀ ಹಿನ್ನೆಲೆಯಲ್ಲಿ ಬಂದವರು, ಮತ್ತು ಈಗಾಗಲೇ ಬೇರೆ ಬೇರೆ ಸದನಗಳ ಅನುಭವವನ್ನು ಪಡೆದವರು. ಇವತ್ತು ಈ ಸದನದಲ್ಲಿ ಈ ಒಂದು ಘಟನೆ ನಡೆದಿರುವುದು ಚೆನ್ನಾಗಿಲ್ಲವೆಂದು ಹೇಳುತ್ತೇನೆ. ಆದರೆ ಒಂದು ಮಾತನ್ನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಹೇಳುತ್ತೇನೆ. ಏನೆಂದರೆ, ಸ್ವಾಮಿ ಹೊರಗಡೆ ಗುಂಡು ಹಾರಿಸಿ ಸ್ಮಶಾನವನ್ನು ತಯಾರು ಮಾಡುವುದಕ್ಕಿಂತ ಇಲ್ಲಿ ಸ್ವಲ್ಪ ಚಪ್ಪಾಳೆ ಕೇಳುವುದು ಉತ್ತಮ ಆ ಸ್ಮಶಾನ ಮೌನಕ್ಕಿಂತ ಇಲ್ಲಿ ಚಪ್ಪಾಳೆ ಕೇಳುವುದು ಉತ್ತಮ. ಆದರೆ ಇದು ದಿಳನಿತ್ಯದ ಕೆಲಸ ಆಗಬಾರದು ಎನ್ನುವುದನ್ನು ನಾನು ಒಪ್ಪುತ್ತೇನೆ. ಇದು ಇಲ್ಲಿನ ದಿನನಿತ್ಯದ ಕೆಲಸವಾಗಬಾರದು, ಹೊರಗಡೆ ಗುಂಡಿನ ಸ್ಮಶಾನವಾಗಬಾರದು. ಆ ರೀತಿ ನಾವು ನೋಡಿಕೊಳ್ಳೋಣ. ತಾವು ಸಹಕರಿಸಿ ಒಳ್ಳೆಯ ಸತ್ಸಂಪ್ರದಾಯವನ್ನು ಹಾಕಿದಿರಿ. ಮಾನ್ಯ ಅಧ್ಯಕ್ಷರಿಗೆ ಸಾಧ್ಯವಾದಷ್ಟು ಸಹಕರಿಸಿ, ತಾವು ಹೇಳಿರುವ ಪ್ರಕಾರ ನಿಯಮಾವಳಿಗಳನ್ನು ಅನುಸರಿಸಿ ಈ ಸತ್ಸಂಪ್ರದಾಯವನ್ನು ಉಳಿಸತಕ್ಕ ಮಾರ್ಗದರ್ಶನವನ್ನು ತಾವು ಮಾಡಿಕೊಡುತ್ತೀರಿ ಎಂದು ತಮಗೂ ಹೇಳಿ, ಮಾನ್ಯ ಅಧ್ಯಕ್ಷರಿಗೆ ಬರುವ ದಿವಸಗಳಲ್ಲಿ ಬಹಳ ಕಷ್ಟದ ಪರಂಪರೆಗಳನ್ನು ಎದುರಿಸತಕ್ಕ ಎಲ್ಲಾ ಶಕ್ತಿ, ಸ್ಥೈರ್ಯ ದೊರೆಯಲಿ ಎಂದು ವೈಯುಕ್ತಿಕವಾಗಿ ಹಾರೈಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಸವರಾಜ ಪಾಟೀಲ್ ಅನ್ವಾರಿ (ಲಿಂಗಸೂಗೂರ್).—ಮಾನ್ಯ ಸಭಾಧ್ಯಕ್ಷರೆ, ಈ ದಿವಸ ವಿಧಾನಸಭೆಯ ಅಧ್ಯಕ್ಷರಾಗಿರತಕ್ಕ ತಮ್ಮನ್ನು ನಾನು ವೈಯುಕ್ತಿವಾಗಿ ಮತ್ತು ನನ್ನ ಪಕ್ಷದ ಪತಿಯಿಂದ ಸ್ವಾಗತ ಮಾಡುತ್ತೇನೆ. ನಾನು ಸದನದ ಕಾರ್ಯಕಲಾಪ ಇದೇ ರೀತಿ ನಡೆಯಬೇಕು ಎಂದು ಸಲಹೆ ಮಾಡುವುದಕ್ಕಿಂತಲೂ ಒಂದು ವಿಷಯವನ್ನು ಹೇಳುತ್ತೇನೆ. ಈ ಸದನಕ್ಕೆ ಕೆಲವು ಹೊಸ ಸದಸ್ಯರು ಆರಿಸಿ ಬಂದಿದ್ದಾರೆ. ಹೊಸ ಸದಸ್ಯರು ಆರಿಸಿ ಬಂದಿರುವಾಗ ಅವರ ತೊಂದರೆಗಳೇನು ಎನ್ನುವುದನ್ನು ತಮ್ಮ ಮುಂದೆ ಇಡಬೇಕಾಗುತ್ತದೆ ಕಳೆದ ಸಾರಿ ಎಷ್ಟೋ ಪ್ರಶ್ನೆಗಳನ್ನು ಕಳಿಸಿದರೂ ೫ ವರ್ಷಗಳಲ್ಲಿ ಹೊಸ ಸದಸ್ಯರ ಪ್ರಶ್ನೆಗಳು ಸದನದ ಮುಂದೆ ಬರಲಿಲ್ಲ. ಈಗ ಆ ಕಡೆ ಮತ್ತು ಈ ಕಡೆ ೧೦೦ಕ್ಕೆ ೮೦ರಷ್ಟು ಹೊಸ ಸದಸ್ಯರು ಆರಿಸಿ ಬಂದಿದ್ದಾರೆ. ಆದುದರಿಂದ ದಯವಿಟ್ಟು ಹೊಸ ಸದಸ್ಯರ ತೊಂದರೆಯನ್ನು ನಿವಾರಣೆ ಮಾಡಿಕೊಡುತ್ತೀರಿ ಎಂದು ನಾನು ಎಲ್ಲಾ ಸದಸ್ಯರ ಪತಿಯಿಂದ ತಮ್ಮನ್ನು ಕೇಳಿಕೊಳ್ಳುತ್ತೇನೆ ಪ್ರತಿ ಸದನದಲ್ಲೂ ಎಲ್ಲರ ಪ್ರಶ್ನೆಗಳು ಬರುತ್ತವೆ, ಆದರೆ ನಾವು ಕೇಳಿದಂಥ ಹೊಸ ಸದಸ್ಯರ ಪ್ರಶ್ನೆಗಳು ಬರುವುದಿಲ್ಲ. ಅಲ್ಲದೇ ಯಾವುದೇ ಡಿಮ್ಯಾಂಡ್ ಮೇಲೆ ಮಾತನಾಡಬೇಕು ಎಂದು ಕೇಳಿದರೂ ಹೊಸ ಸದಸ್ಯರಿಗೆ ಅವಕಾಶ ಸಿಕ್ಕುವುದಿಲ್ಲ. ವಿರೋಧ ಪಕ್ಷದಲ್ಲಿ ಹಳೆಯ ಸದಸ್ಯರೂ ಬಹಳ ಬಂದಿದ್ದಾರೆ, ಹೊಸ ಸದಸ್ಯರೂ ಬಂದಿದ್ದಾರೆ. ಹೊಸ ಸದಸ್ಯರಿಗೆ ಯಾವ ರೀತಿ ಕೆಲಸ ಮಾಡಬೇಕು ಎನ್ನುವುದು ಚಿಂತೆಯಾಗಿ ಉಳಿಯುತ್ತದೆ. ತಾವು ಯುವಕ ಮುಖಂಡರಾಗಿ ಕೆಲಸ ಮಾಡಿದ್ದೀರಿ, ವಿರೋಧ ಪಕ್ಷದ ಮುಖಂಡರಾಗಿ ಕೆಲಸ ಮಾಡಿದ್ದೀರಿ ಈಗ ಸಭಾಧ್ಯಕ್ಷರಾಗಿ

ಕೆಲಸಮಾಡತಕ್ಕ ಅವಕಾಶ ತಮಗೆ ದೊರೆತಿದೆ. ಈ ಒಂದು ಪರಿಸ್ಥಿತಿಯಲ್ಲಿ ನಮ್ಮ ಹೊಸ ಮಂದಿಯಲ್ಲಿರತಕ್ಕ ವಿಚಾರವನ್ನು ಸರಿಯಾಗಿ ನಡೆಸಿಕೊಡುತ್ತೀರಿ ಎಂದು ಭಾವಿಸುತ್ತೇನೆ. ಶಾಸಕರ ಭವನದಲ್ಲಿ ಶಾಸಕರಿಗೆ ಬಹಳಷ್ಟು ವ್ಯತ್ಯಾಸಗಳು ಇರುತ್ತವೆ. ಆದುದರಿಂದ ತಾವು ಆಗಾಗ್ಗೆ ಶಾಸಕರ ಭವನಕ್ಕೆ ಬಂದು ಶಾಸಕರ ಪರಿಸ್ಥಿತಿಯನ್ನು ನೋಡಿಕೊಳ್ಳುತ್ತೀರಿ ಎಂದು ತಿಳಿದುಕೊಂಡಿದ್ದೇನೆ. ಮುಂದೆ ಯಾವುದೇ ಪರಿಸ್ಥಿತಿಯಲ್ಲಿ ತಮಗೆ ಎಲ್ಲಾ ಸಹಕಾರವನ್ನು ಕೊಡುತ್ತೇವೆ ಎಂದು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ತಾವು ಸಭಾಧ್ಯಕ್ಷರ ಸ್ಥಾನವನವನ್ನು ಅಲಂಕರಿಸ ತಕ್ಕಂಥದ್ದು ನಮಗೆಲ್ಲರಿಗೂ ಸಂತೋಷವನ್ನು ತಂದುಕೊಟ್ಟಿದೆ. ಮಲೆನಾಡಿನ ಮಣ್ಣಿನ ಮಗನಾಗಿ ಹುಟ್ಟಿ ಮಣ್ಣಿನ ಮಕ್ಕಳ ಸಮಸ್ಯೆಗಳನ್ನು ಅರಿತು ಜೀವನದಲ್ಲಿ ಮುಂದುವರಿದು ತಾವು ಇಲ್ಲಿ ಪ್ರವೇಶ ಮಾಡಿದ್ದೀರಿ ಮತ್ತು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದೀರಿ. ಈ ಸದನದ ಹಿರಿಯ ಸದಸ್ಯರು ತಮ್ಮನ್ನು ಏನು ಅಭಿನಂದಿಸಿದ್ದಾರೆ ಮತ್ತು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ, ಆ ಸಂತೋಷದಲ್ಲಿ ನಾನೂ ಕೂಡ ಭಾಗಿಯಾಗಿ ಈ ಸಂದರ್ಭದಲ್ಲಿ ಒಂದು ಮಾತನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ಒಂದು ವಿಧಾನಸಭೆಯಲ್ಲಿ ಬಹಳಷ್ಟು ಜನ ಯುವಕರು ಹೊಸ ಮುಖಗಳು ಆರಿಸಿ ಬಂದಿದ್ದಾರೆ. ನಮಗೆ ಈ ಒಂದು ಪಾರ್ಲಿಮೆಂಟರಿ ಪದ್ಧತಿಯಲ್ಲಿ ಅನುಭವವಿಲ್ಲದೇ ಇರಬಹುದು. ಆದರೆ ತಾವು ರಾಜ್ಯದ ಜನತೆಯ ಆಶೋತ್ತರಗಳನ್ನು ಈಡೇರಿಸಲಿಕ್ಕೆ ಅದರಲ್ಲೂ ವಿಶೇಷವಾಗಿ ಬಡವರ, ದುರ್ಬಲವರ್ಗದವರ, ಯುವಕರ ಸಮಸ್ಯೆಗಳನ್ನು ಅರಿತುಕೊಂಡು ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಹಿಡಿಯಬೇಕು, ತಾವು ಯುವಕ ಮುಖಂಡರಾಗಿದ್ದೀರಿ, ಯುವಕರ ಸಮಸ್ಯೆಗಳನ್ನು ಅರಿತುಕೊಂಡಿದ್ದೀರಿ, ರೈತರ ಸಮಸ್ಯೆಗಳನ್ನು ಅರಿತುಕೊಂಡಿದ್ದೀರಿ, ತಮ್ಮ ರಾಜಕೀಯ ಜೀವನ ಒಂದು ಹೋರಾಟದ ರೀತಿಯಲ್ಲಿ ನಡೆದುಕೊಂಡು ಬಂದಿದೆ. ಈ ವಿಧಾನಸಭೆಯಲ್ಲಿ ಯುವಕರು ಯಾರಿದ್ದಾರೆ, ಕಿರಿಯ ಸದಸ್ಯರು ಯಾರಿದ್ದಾರೆ, ಹೊಸ ಮುಖಗಳು ಯಾರಿದ್ದಾರೆ ಅವರು ಸರಿಯಾಗಿ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮನ್ನು ಕೇಳಿಕೊಂಡು ತಾವು ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿದ್ದೀರಿ. ಅದಕ್ಕಾಗಿ ನನ್ನ ಪರವಾಗಿ ಅಭಿನಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಸಭಾಧ್ಯಕ್ಷರೆ, ವಿಧಾನ ಸಭೆಯಲ್ಲಿ ಇವತ್ತಿನ ದಿವಸ ನಾನು ತಮ್ಮನ್ನು ನೋಡುತ್ತಿದ್ದೇನೆ. ತಾವು ಯುವಕ ನಾಯಕರಾಗಿ, ರೈತ ನಾಯಕರಾಗಿ, ವಿದ್ಯಾರ್ಥಿಗಳ ನಾಯಕರಾಗಿ, ವಿರೋಧಪಕ್ಷದ ನಾಯಕರಾಗಿ—ಹೀಗೆ ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡಿದ್ದೀರಿ. ಇವತ್ತಿನ ದಿವಸ ತಾವು ವಿಧಾನಸಭೆಗೆ ಆರಿಸಿ ಬಂದಿದ್ದೀರಿ, ಆದಕ್ಕಾಗಿ ನಾನು ನನ್ನ ಪರವಾಗಿ ಮತ್ತು ನಮ್ಮ ಕಿಸಾನ್ ಸಂಘದ ಪರವಾಗಿ, ಕಾಂಗ್ರೆಸ್–ಐ ಅವರ ವತಿಯಿಂದ ಸ್ವಾಗತ ಮಾಡುತ್ತಿದ್ದೇನೆ, ನಾನು ನಾಲ್ಕನೇ ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಬಂದಿದ್ದೇನೆ. ನಾನು ಎಷ್ಟೋಸಾರಿ ನೋಡಿದ್ದೇನೆ. ಒಂದೊಂದು ಸಲ ಸದಸ್ಯರಲ್ಲಿ ಭಿನ್ನ ವಿಚಾರಗಳು ಬಂದು ಒಂದು ಪ್ರಕಾರ ಡಿಸ್ಕಷನ್‌ಗೆ ಬಂದು ಸ್ವಲ್ಪ ಬಿಸಿ ವಾತಾವರಣ ಬರುತ್ತದೆ. ಇವತ್ತಿನ ದಿವಸ ಈ ಒಂದು ಘಟನೆಯನ್ನು ನೋಡಿದರೆ, ಅಧಿವೇಶನದ ಪ್ರಾರಂಭದಲ್ಲೇ ಹೀಗಾದರೆ ಮುಂದೆ ಏನಾಗುತ್ತದೆ ಎನ್ನುವ ವಿಚಾರ ಬಗ್ಗೆ ಮಾಡಬೇಕಾಗಿದೆ. ಆ ದೃಷ್ಟಿಯಿಂದ ತಮ್ಮಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಈ ರೀತಿಯಾಗಿಯಾವ ಪಕ್ಷದವರೇ ಮಾಡಿರಲಿ, ಈ ಕಡೆ ಪಕ್ಷದವರೇ ಇರಲಿ, ಇಲ್ಲ ಆ ಕಡೆಯ ಪಕ್ಷದವರೇ ಮಾಡಿರಲಿ ತಪ್ಪು ಮಾಡಿದ್ದರೆ ತಪ್ಪು ಎಂದೇ ಹೇಳಬೇಕಾಗುತ್ತದೆ. ಮತ್ತು ಇಲ್ಲಿ ಎಲ್ಲಾ ಪಕ್ಷದ ಸದಸ್ಯರಿಗೂ ತಾವು ರಕ್ಷಣೆಯನ್ನು ನೀಡಬೇಕಾಗಿರುತ್ತದೆ ಆದುದರಿಂದ ಇವತ್ತಿನ ದಿವಸ ಇಲ್ಲಿ ಪಕ್ಷ ಮುಖ್ಯವಲ್ಲ. ಸಮುದ್ರದ ನೀರನ್ನು ಹೊರಕ್ಕೆ ಆಕಡೆ ಇಟ್ಟರೂ ಉಪ್ಪೇ ಈ ಕಡೆ ಇಟ್ಟರು ಉಪ್ಪೇ ಆದುದರಿಂದ ಯಾರೇ ತಪ್ಪು ಮಾಡಿರಲಿ ಅದು ತಪ್ಪಾಗುತ್ತದೆ. ಹೊರಗಡೆ ನಡೆಯುವಂಥಾದ್ದು ಇವತ್ತು ಒಳಗಡೆ ನಡೆದಿದೆ. ಈ ರೀತಿಯಾಗಬಾರದಿತ್ತು. ನಮ್ಮಲ್ಲಿಎಷ್ಟೋ ಜಾತಿಗಳು, ಎಷ್ಟೋ ಪಂಗಡಗಳು, ಎಷ್ಟೋ ಭಾಷೆಗಳು ಇವೆ, ಆದುದರಿಂದ ಸಂವಿಧಾನದ ಪ್ರಕಾರವಾಗಿ ಇಲ್ಲಿ ನಡೆದುಕೊಳ್ಳಬೇಕಾಗುತ್ತದೆ... .

(ಗೊಂದಲ)

ನಾನು ಈಲ್ಡ್ ಆಗದೇ ಇರುವಾಗ ಮಧ್ಯೆ ಮಧ್ಯೆ ಮಾನ್ಯ ಸದಸ್ಯರುಗಳು ಮಾತನಾಡುವುದು ಸರಿಯಲ್ಲ. ಇವತ್ತು ರಾಜ್ಯದಲ್ಲಿ ಡಿಫೆಕ್ಷನ್ ಪಿಡುಗು ಇದೆ. ಆ ಕಡೆಯಿಂದ ಈ ಕಡೆಯಿಂದ ಆ ಕಡೆಗೆ ಹೋಗುವಂಥಾದ್ದು ಏನಿದೆ ಅದನ್ನು ತಡೆಗಟ್ಟುವ ಬಗ್ಗೆ ಒಂದು ಮಸೂದಾ ಕಾನೂನು ತನ್ನಿ ಎಂದು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಅಧ್ಯಕ್ಷರೇ, ನಾವು ಎಷ್ಟೋ ಪ್ರಶ್ನೆಗಳು, ಮತ್ತು ಗಮನ ಸೆಳೆಯುವ ಪ್ರಶ್ನೆಗಳನ್ನು ಕಳುಹಿಸಿ ಆರು ತಿಂಗಳು, ೮ ತಿಂಗಳಾದರೂ ನಮ್ಮ ಪ್ರಶ್ನೆಗಳೇ ಬರುವುದಿಲ್ಲ ಒಂದಕ್ಕೂ ಸರ್ಕಾರದವರಿಂದ ಉತ್ತರ ಬಂದಿಲ್ಲ.. ಹಿಂದಿನ ಸರ್ಕಾರದವರು ಎಷ್ಟೋ ಸಾರಿ ವಾರ್ನಿಂಗ್ ಕೊಟ್ಟರೂ ಉತ್ತರ ಬಂದಿಲ್ಲ. ತಮ್ಮ ಕಾಲದಲ್ಲಿಯಾದರೂ ನಮ್ಮ ಪ್ರಶ್ನೆಗಳಿಗೆ ಉತ್ತರ ಆದಷ್ಟು ಬೇಗ ತರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನು ಈ ಬಾರಿ ಈ ಕಡೆಯಲ್ಲಿ ಮತ್ತು ಆ ಕಡೆಯಲ್ಲಿ ನವ ಉತ್ಸಾಹಿ ತರುಣರು ಬಂದಿದ್ದಾರೆ. ಅವರೆಲ್ಲರಿಗೂ ಸಭೆಯಲ್ಲಿ ಮಾತನಾಡಲು ಸಮಾನವಾದ ಅವಕಾಶವನ್ನು ಕಲ್ಪಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಸಭೆಯಲ್ಲಿ ಶಾಂತಿ ಮತ್ತು ಶಿಸ್ತನ್ನು ಪರಿಪಾಲನೆ ಮಾಡಿ ನಮ್ಮ ಪ್ರಶ್ನೆಗಳಿಗೆ ಸರ್ಕಾರದಿಂದ ಆದಷ್ಟು ಬೇಗ ಉತ್ತರಗಳನ್ನು ತರಿಸುವುದಕ್ಕೆ ಪ್ರಯತ್ನ ಮಾಡಬೇಕೆಂದು ಮತ್ತೊಮ್ಮೆ ಕೇಳಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಮೈಕಲ್ ಫರ್ನಾಂಡೀಸ್ (ಭಾರತಿ ನಗರ).—ಮಾನ್ಯ ಸಭಾಪತಿಗಳೇ, ಈ ಸದನದ ಚರಿತ್ರೆಯಲ್ಲಿಯೇ ಬಹುಶಃ ನಾನು ತಿಳಿದುಕೊಂಡ ಹಾಗೆ ತಾವೇ ಚಿಕ್ಕ ವಯಸ್ಸಿನಲ್ಲಿ ಈ ಒಂದು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿರುವುದು. ನಿಮ್ಮ ಅನುಭವಗಳ ಪಟ್ಟಿಯನ್ನು ನಾನು ಪುನಃ ಉಚ್ಚರಿಸಲಿಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಇಲ್ಲಿಯವರೆಗೆ ಅನೇಕರು ಪ್ರಸ್ತಾಪಿಸಿದ್ದಾರೆ. ಒಂದೇ ವಿಚಾರದ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ನೀವು ಬರೀ ಈ ಸದನದ ಅಧ್ಯಕ್ಷರು ಎಂದು ನಾನು ಪರಿಗಣಿಸುತ್ತಿಲ್ಲ ಏತಕ್ಕೆಂದರೆ ಈ ಸದನದ ಮೂಲಕ ನಮ್ಮ ಕರ್ನಾಟಕ ರಾಜ್ಯದ ೪ ಕೋಟಿ ಜನರಿಗೆ ಒಳ್ಳೆಯದಾಗಬೇಕು, ಅವರ ಜೀವನ ಸುಧಾರಣೆಯಾಗಬೇಕಾಗಿರುವುದರಿಂದ ನೀವು ಇಡೀ ಕರ್ನಾಟಕಕ್ಕೇ ಈ ಸದನದ ಮೂಲಕ ಅಧ್ಯಕ್ಷರಾಗಿದ್ದೀರೆಂದು ತಿಳಿದುಕೊಂಡಿದ್ದೇನೆ. ೪ ಕೋಟಿ ಜನರ ಒಂದು ಹಿತರಕ್ಷಣೆ ತಮ್ಮ ಮೂಲಕ ಆಗಬೇಕಾಗಿದೆಯೆಂದು ನಾನು ನಂಬಿಕೊಂಡಿದ್ದೇನೆ. ಈಗ ತಾವು ಏನೋ ಆಳುವ ಪಕ್ಷದ ವತಿಯಿಂದ ಗೆದ್ದು ಬಂದಿದ್ದೀರಿ ಆದರೆ ಇವತ್ತಿನಿಂದ ಮತ್ತು ಈಗಿನಿಂದ ನೀವು ಯಾವ ಪಕ್ಷಕ್ಕೂ ಸೇರಿದವರಲ್ಲ. ನೀವು ಆಳುವ ಪಕ್ಷವನ್ನು ಬಿಟ್ಟು ಎಲ್ಲರನ್ನೂ ಪ್ರತಿನಿಧಿಸುವ ಈ ಮುಖ್ಯವಾದ ಸ್ಥಾನವನ್ನು ಅಲಂಕರಿಸಿದ್ದೀರಿ. ಇಲ್ಲಿ ಸೇರಿರುವಂಥಾ ೨೨೪ ಜನ ಸದಸ್ಯರುಗಳು ಯಾವುದೇ ಪಕ್ಷದಿಂದ ಆರಿಸಿ ಬಂದಿದ್ದರೂ ಕೂಡ ಅವರು ಆ ಜಾತಿಗೆ, ಈ ಜಾತಿಗೆ, ಆ ಭಾಷೆಗೆ, ಈ ಭಾಷೆಗೆ, ಸೇರಿದಂಥವರು ಅಲ್ಲವೆಂದು ತಿಳಿದುಕೊಂಡಿದ್ದೇನೆ. ನಾವು ಎಲ್ಲರೂ ಎಲ್ಲಾ ಜನರನ್ನು ಪ್ರತಿನಿಧಿಸುವಂಥವರು. ತಾವು ಸಹ ಯಾವುದೇ ಜಾತಿ, ಭಾಷೆಗೆ ಸೇರಿದಂಥವರು ಅಲ್ಲ, ಎಲ್ಲರನ್ನೂ ಪ್ರತಿನಿಧಿಸುವಂಥವರು, ಹಾಗಿದ್ದ ಮೇಲೆ ಎಲ್ಲರ ಹಿತ ರಕ್ಷಣೆಯನ್ನು ಕಾಪಾಡುವಂಥಾದ್ದು ತಮ್ಮ ಕರ್ತವ್ಯವೆಂದು ತಿಳಿದುಕೊಂಡಿದ್ದೇನೆ. ಭಾಷೆಯಿಂದ ಅಲ್ಪಸಂಖ್ಯಾತರಾಗಿರಲೀ. ಇಲ್ಲವೇ ಮತೀಯವಾಗಿ ಅಲ್ಪಸಂಖ್ಯಾತರಾಗಿರಲಿ, ಇನ್ನು ಯಾವುದೇ ತರಹದಲ್ಲಿ ಅಲ್ಪಸಂಖ್ಯಾತರು ಆಗಿರಲಿ ಅವರೆಲ್ಲರ ಹಿತ ರಕ್ಷಣೆಯನ್ನು ಮಾಡುವಂಥಾದ್ದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ನಿಮ್ಮ ಒಂದು ಜಾಣ್ಮೆಯಿಂದ ನಿಮ್ಮ ಒಂದು ಬುದ್ಧಿವಂತಿಕೆಯಿಂದ ಮತ್ತು ಅನುಭವದಿಂದ ಮುಂದಿನ ೫ ವರ್ಷಗಳಲ್ಲಿ ಇದನ್ನೆಲ್ಲ ಈಡೇರಿಸುವುದಕ್ಕೆ ಸಾಧ್ಯವಾಗುತ್ತದೆಂದು ನಂಬಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಲ್ಲೇ ಭಾಷಾ ಅಲ್ಪಸಂಖ್ಯಾತರು ಇರಲಿ, ಮತೀಯ ಅಲ್ಪಸಂಖ್ಯಾತರು ಇರಲಿ ಅವರು ಇಲ್ಲಿ ಒಳಗಡೆಯೇ ಇರಲಿ ಇಲ್ಲ ಹೊರಗಡೆಯೇ ಇರಲಿ ಅವರ ಹಿತರಕ್ಷಣೆಯನ್ನು ನೋಡಿಕೊಳ್ಳತಕ್ಕ ಜವಬ್ದಾರಿಯನ್ನು ನಿಮ್ಮ ಮೇಲೆ ನಾವು ಹೊರಿಸುತ್ತಿದ್ದೇವೆ ಅದನ್ನು ಪರಿಪಾಲಿಸುತ್ತೀರಿ ಎಂದು ನಂಬಿದ್ದೇನೆ. ನಮ್ಮ ಕನ್ನಡಿಗರ ಹಿತರಕ್ಷಣೆ ಕರ್ನಾಟಕದಲ್ಲಿ ಮಾತ್ರವಲ್ಲ ಕರ್ನಾಟಕ ರಾಜ್ಯದಿಂದ ಹೊರಗೂ ಕೂಡ ನೋಡಿಕೊಳ್ಳತಕ್ಕ ಸನ್ನಿವೇಶ ಈ ಸದನದ ಮೂಲಕ ಬಂದಿದೆ. ಹಾಗೂ ಇನ್ನು ಮುಂದೆ ಬರುವಂಥಾ ಅವಕಾಶವಿದೆಯೆಂದು ನನಗೆ ಭಯವಿದೆ. ಏತಕ್ಕೆಂದರೆ ಗೋವಾದಲ್ಲಿ ಕನ್ನಡಿಗರ ಮೇಲೆ ಏನಾಯಿತು ಎಂಬುದನ್ನು ನೋಡಿದ್ದೇವೆ ಮಹಾರಾಷ್ಟ್ರದಲ್ಲಿ ಕನ್ನಡಿಗರ ಮೇಲೆ ಏನು ಆಗುತ್ತದೆಂಬುದನ್ನು ನೋಡುತ್ತಿದ್ದೇವೆ. ಅದೇ ರೀತಿ ಬೇರೆ ರಾಜ್ಯಗಳವರ, ಬೇರೆ ಭಾಷೆಯ ಅಲ್ಪಸಂಖ್ಯಾತರ ಹಿಂತರಕ್ಷಣೆಯನ್ನು ಸಹ ತಾವು ಕಾಪಾಡುವುದು ತಮ್ಮ ಕರ್ತವ್ಯವಾಗಿದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅಲ್ಪಸಂಖ್ಯಾತರ

ಒಂದು ನಿಕಟ ಸಂಪರ್ಕ ನಿಮಗೂ ಇದೆ, ಇದರಿಂದ ಈ ಒಂದು ಸಮಸ್ಯೆಯನ್ನು ನಿವಾರಣೆ ಮಾಡಲು ನಿಮ್ಮಿಂದ ಸಾಧ್ಯವಾಗುತ್ತದೆಂದು ನಂಬಿದ್ದೇನೆ. ಅಲ್ಪಸಂಖ್ಯಾತರಿಗಾಗಿ ತಾವು ಕಾಳಜಿ ವಹಿಸಿ ಅವರಿಗೆ ಯಾವುದೇ ರೀತಿಯ ತೊಂದರೆ ಈ ಸದನದ ಒಳಗಾಗಲೀ ಇಲ್ಲವೇ ಹೊರಗಡೆಯಾಗಲೀ ಆಗದೇ ಹಾಗೆ ನೋಡಿಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಂಡು, ಈ ೫ ವರ್ಷಗಳಲ್ಲಿ ತಮ್ಮ ಒಂದು ಅನುಭವದಿಂದ ಮತ್ತು ಹೊಸ ಸರ್ಕಾರದಿಂದ ಈ ಸದನದ ಕಾರ್ಯಕಲಾಪಗಳು ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗಲಿ ಮತ್ತು ಜನರ ಜೀವನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗಲಿ ಎಂದು ಹಾರೈಸುತ್ತೇನೆ. ನಿಮಗೆ ಎಲ್ಲಾ ಸಹಕಾರವನ್ನು ಕೊಡುವುದರ ಜೊತೆಗೆ ನಿಮ್ಮ ಎಲ್ಲಾ ಕೆಲಸಗಳು ಯಶಸ್ವಿಯಾಗಲಿ ಎಂದು ನಾನು ಮತ್ತೊಮ್ಮೆ ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈ ಸಂದರ್ಭದಲ್ಲಿ ಕಾಲದ ಮಿತಿಯನ್ನು ಹಾಕುವುದು ಸರಿಯಾದುದಲ್ಲ. ಆದ್ದರಿಂದ, ತಮ್ಮಷ್ಟಕ್ಕೆ ತಾವೇ ಮಿತಿ ಹಾಕಿಕೊಂಡು ಮಾತು ಮುಗಿಸಿದರೆ ಹೆಚ್ಚು ಜನರಿಗೆ ಮಾತನಾಡುವುದಕ್ಕೆ ಅವಕಾಶ ಸಿಗಬಹುದು,

ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ತಾವು ನಮ್ಮ ಕರ್ನಾಟಕ ವಿಧಾನಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದಕ್ಕೆ ಪ್ರಥಮವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಒಂದು ಮಾತನ್ನು ತಾವು ಗಮನದಲ್ಲಿಡಬೇಕು ಇದು ಕರ್ನಾಟಕ ರಾಜ್ಯ ಕರ್ನಾಟಕ ರಾಜ್ಯದಲ್ಲಿ ನಡೆಯತಕ್ಕ ಎಲ್ಲ ವ್ಯವಹಾರಗಳೂ ಕೂಡ ಕನ್ನಡದಲ್ಲೇ ನಡೆಯಬೇಕೆಂಬ ಆಜ್ಞೆಯನ್ನು ತಾವು ಮಾಡಬೇಕು. ಅದನ್ನು ನಡೆಸುವುದಕ್ಕೆ ತಾವು ಎಲ್ಲ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ. ನಾವು ಕನ್ನಡದ ಬಗ್ಗೆ ಮಾತನಾಡುತ್ತೇವೆ. ಆದರೆ ಎಲ್ಲ ವ್ಯವಹಾರಗಳನ್ನು ಆಂಗ್ಲ ಭಾಷೆಯಲ್ಲಿ ನಡೆಸುತ್ತೇವೆ. ಆದ್ದರಿಂದ ಅನೇಕ ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ದಯವಿಟ್ಟು ತಾವು ಈ ಬಗ್ಗೆ ಹೆಚ್ಚಿನ ಗಮನ ಹರಿಸಬೇಕು. ವಿಧಾನ ಸಭೆಯ ಅಧ್ಯಕ್ಷ ಪೀಠವನ್ನು ಅಲಂಕರಿಸಿರುವ ತಾವು ತಮ್ಮ ಅಧಿಕಾರಾವಧಿಯಲ್ಲಿ ಸರ್ಕಾರದಲ್ಲಿ ಮತ್ತು ವಿಧಾನ ಸಭೆಯಲ್ಲಿ ನಡೆಯತಕ್ಕ ಎಲ್ಲ ವ್ಯವಹಾರಗಳನ್ನು ಕನ್ನಡದಲ್ಲೇ ನಡೆಸುವುದಕ್ಕೆ ಸಂಪೂರ್ಣವಾಗಿ ವ್ಯವಸ್ಥೆಗೊಳಿಸಬೇಕು. ಆ ದಿಕ್ಕಿನಲ್ಲಿ ತಾವು ವಿಶೇಷವಾಗಿ ಗಮನ ಹರಿಸಬೇಕು ಮತ್ತು ತಮ್ಮ ಈ ಅಧಿಕಾರಾವಧಿಯಲ್ಲಿ ನಮ್ಮಂಥ ಸಾಮಾನ್ಯ ಸದಸ್ಯರಿಗೂ ಕೂಡ ಹೆಚ್ಚಿನ ಅವಕಾಶ ಒದಗಿಸಿಕೊಡಬೇಕು. ಇನ್ನೊಂದು ಸಂತೋಷದ ಸಂಗತಿ ಎಂದರೆ. ನರಗುಂದದಿಂದ ರೈತರ ಜಾತಾವನ್ನು ತಂದಿರತಕ್ಕ ಶ್ರೇಯಸ್ಸು ತಮಗೆ ಸೇರಿದ್ದು. ಇಡೀ ರೈತರ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆ ಎಂಬುದು ಇದರಿಂದ ನಮಗೆ ಸ್ಪಷ್ಟವಾಗುತ್ತವೆ. ಅವರ ಸಮಸ್ಯೆಗಳನ್ನು ಚನ್ನಾಗಿ ತಿಳಿದುಕೊಂಡಿರುವವರು ತಾವು. ಅವರಿಗೆ ಇರತಕ್ಕ ಅನೇಕ ಸಮಸ್ಯೆಗಳನ್ನು ಬಿಡಿಸುವುದಕ್ಕೆ ವಿಧಾನ ಸಭೆಯಲ್ಲಿ ಹೆಚ್ಚಿನ ಅವಕಾಶ ಒದಗಿಸಿಕೊಡಬೇಕೆಂದು ಕೇಳಿಕೊಂಡು ತಮಗೆ ನಮ್ಮ ಪಕ್ಷದ ಪರವಾಗಿ ಮತ್ತು ಎಲ್ಲ ಸದಸ್ಯರ ಪರವಾಗಿ ಎಲ್ಲ ರೀತಿಯ ಸಹಕಾರ ಕೊಡುವುದರ ಮೂಲಕ ಸದನ ವ್ಯವಸ್ಥಿತವಾಗಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳುತ್ತಾ, ಈ ಸಂದರ್ಭದಲ್ಲಿ ನನಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಹೊಳೇಹೊನ್ನೂರು).—ಮಾನ್ಯ ಅಧ್ಯಕ್ಷರೇ, ತಾವು ಈ ಮನೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದು ಈ ಮನೆಯ ಗೌರವ ಮತ್ತು ಸಂಪ್ರದಾಯವನ್ನು ಎತ್ತಿಹಿಡಿದಂತಾಗಿದೆ. ತಾವು ರೈತ ಕುಟುಂಬದಿಂದ ಬಂದಿದ್ದೀರಿ, ತಮಗೆ ದೊರಕಿದ ಗೌರವ ಈ ನಾಡಿನ ರೈತ ಜನತೆಗೆ ಸಂದ ಗೌರವವಾಗಿದೆ. ರಾಜಕೀಯ ಪ್ರವೇಶ ಮಾಡುತ್ತಿದ್ದಂತೆಯೇ ಯುವ ಕಾಂಗ್ರೆಸಿನ ನಾಯಕರಾಗಿ ಅದಕ್ಕೆ ರೂಪುರೇಷೆ ಕೊಟ್ಟ ಧುರೀಣರು ತಾವಾಗಿದ್ದೀರಿ. ಈ ರಾಜ್ಯದ ಸಣ್ಣ ನೀರಾವರಿ ಮಂತ್ರಿಗಳಾಗಿದ್ದು ರೈತರ ಸಮಸ್ಯೆಗಳನ್ನು ಅರಿತು ಅದಕ್ಕೆ ಸರಿಯಾದ ಪರಿಹಾರ ಒದಗಿಸಿದವರು ತಾವಾಗಿದ್ದೀರಿ ಮೇಲ್ಮನೆಯಲ್ಲಿ ವಿರೋಧ ಪಕ್ಷದ ನಾಯಕರಾಗಿ ಆಡಳಿತ ಪಕ್ಷ ತಾನು ಮಾಡುವ ತಪ್ಪುಗಳನ್ನು ತಿದ್ದಿ ಸರಿ ದಾರಿ ತೋರಿದ್ದನ್ನು ಮತ್ತು ವಿರೋಧ ಪಕ್ಷದಲ್ಲಿದ್ದುಕೊಂಡು ಸಕ್ರಿಯ ಪಾತ್ರ ವಹಿಸಿದ್ದನ್ನು ಈ ನಾಡಿನ ಜನ ಮರೆಯುವಂತಿಲ್ಲ. ಅಂಥ ಒಂದು ಗುರುತರವಾದ ಪಾತ್ರವನ್ನು ತಾವು ವಹಿಸಿದ್ದೀರಿ. ಅದರ ಜೊತೆಗೆ ಸಂಸತ್ ಸದಸ್ಯರಾಗಿ ಮಲೆನಾಡಿನ ಮತ್ತು ಕರ್ನಾಟಕದ ಹಿತವನ್ನು ಸಂಸತ್ತಿನಲ್ಲಿ ಕಾಪಾಡಿದ್ದೀರಿ. ಇವತ್ತು ಈ ಸಭೆಯ ಉತ್ನತ ಮಟ್ಟದ ಅಧ್ಯಕ್ಷ ಸ್ಥಾನ ವಹಿಸಿದ್ದೀರಿ, ಮತ್ತು ಸಂಸತ್ ಪಟು ತಾವಾಗಿದ್ದೀರಿ. ಸಂಸದೀಯ ಮೌಲ್ಯಗಳನ್ನು, ಆದರ್ಶಗಳನ್ನು ಹಾಗೂ

ಸತ್‌ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರತಕ್ಕ ಶಕ್ತಿ ತಮಗಿದೆ. ವಿರೋಧ ಪಕ್ಷವನ್ನು ಮತ್ತು ಆಡಳಿತ ಪಕ್ಷವನ್ನು ಸರಿ ದೂಗಿಸಿ ತೆಗೆದುಕೊಂಡು ಹೋಗತಕ್ಕ ಶಕ್ತಿ ಸಾಮರ್ಥ್ಯವನ್ನು ಮತ್ತು ಸ್ಥೈರ್ಯ ಧೈರ್ಯವನ್ನು ದೇವರು ತಮಗೆ ಕರುಣಿಸಲು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಜೆ. ಡಿ. ಸೋಮಪ್ಪ (ಸಕಲೇಶಪುರ).—ಸನ್ಮಾನ್ಯ ಅಧ್ಯಕ್ಷರೇ, ತಾವು ಇಂದು ಕರ್ನಾಟಕ ರಾಜ್ಯದ 7ನೇ ವಿಧಾನಸಭೆಯ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಅಲ್ಲದೆ, ತಾವು ಮಲೆನಾಡಿನ ಮಣ್ಣಿನ ಮಗನಾಗಿ ರೈತ ಕುಟುಂಬದಲ್ಲಿ ಜನಿಸಿ ಬಂದಂಥವರು ಇವತ್ತು ಬಡಜನತೆಯ ಕಷ್ಟಕಾರ್ಪಣ್ಯಗಳು ಏನಿವೆ ಎಂಬುದನ್ನು ತಿಳಿದಂಥವರಾಗಿದ್ದೀರಿ. ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನತೆಯ ನ್ಯಾಯವನ್ನು ತೂಕ ಮಾಡತಕ್ಕ ಒಂದು ಸ್ಥಾನವನ್ನು ತಾವು ಇವತ್ತು ಅಲಂಕರಿಸಿದ್ದೀರಿ. ಇಂಥ ಒಂದು ಸಮಯದಲ್ಲಿ ತಾವು ಯಾವುದೇ ಒಂದು ಪಕ್ಷಪಾತವನ್ನು ಕೂಡ ಮಾಡದೆ ನಡೆದುಕೊಳ್ಳುತ್ತೀರೆಂದು ನಂಬಿದ್ದೇನೆ. ಮಾನ್ಯ ನಾಯಕರು ಮಾತನಾಡುವಾಗ ಹೇಳಿದರು. ನಾವು ರಾಜ್ಯ ಸಭೆಯಲ್ಲಿ ಕನ್ನಡದಲ್ಲಿ ಪ್ರಮಾಣವಚನ ಸ್ವೀಕಾರ ಮಾಡಿದೆವು ಎಂದು. ಅಲ್ಲಿ ನಾನಾ ರಾಜ್ಯಗಳಿಂದ ಬಂದ ನಾನಾ ಭಾಷೆಗಳನ್ನಾಡತಕ್ಕ ಜನ ಇರುತ್ತಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ, ಕನ್ನಡ ನಾಡಿನಲ್ಲಿ, ಕನ್ನಡದ ಮಣ್ಣಿನಲ್ಲಿ ಹುಟ್ಟಿದ ಜನ, ಇಲ್ಲಿ ಬೆಳೆದಂತಹ ಜನರಾದ ನಾವು ಕನ್ನಡದಲ್ಲೇ ಆಳಬೇಕು. ಕನ್ನಡಕ್ಕೆ ಪ್ರೋತ್ಸಾಹ ನೀಡಬೇಕು. ಇವತ್ತು ನಮ್ಮ ಐ. ಎ. ಎಸ್. ಅಧಿಕಾರಿಗಳು ಏನಿದ್ದಾರೆ ಅವರಿಗೆ ಕನ್ನಡ ಕಲಿಸುವ ಪ್ರಯತ್ನ ಮಾಡಬೇಕು. ವಿಧಾನಸಭಾ ಸದಸ್ಯನಾಗಿ ಜನತೆಯ ಸೇವೆ ಮಾಡುತ್ತೇನೆಂದು ಹೇಳಿ ವಿಧಾನ ಸಭೆಗೆ ಬಂದನಂತರ ಕನ್ನಡವನ್ನು ಮರೆಯುತಕ್ಕ ಪ್ರಯತ್ನವನ್ನು ಮಾಡಬಾರದು. ವಿಧಾನ ಸಭೆಯಲ್ಲಿ ಮತ್ತು ಸರ್ಕಾರದಲ್ಲಿ ನಡೆಯುತಕ್ಕ ಯಾವುದೇ ವ್ಯವಹಾರವಾಗಲಿ ಅದು ಕನ್ನಡದಲ್ಲಿ ನಡೆಯಬೇಕು. ಅಂದಾಗ ಪ್ರತಿಯೊಬ್ಬ ಸದಸ್ಯರೂ ಪ್ರಮಾಣ ವಚನ ಸ್ವೀಕಾರ ಮಾಡುವಾಗ ಕನ್ನಡದಲ್ಲೇ ಮಾಡುವಂತೆ ಆಜ್ಞೆ ಮಾಡಬೇಕೆಂದು ಹೇಳಿದ ಮಾತ್ರಕ್ಕೆ ಬೇರೆ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕಾರ ಮಾಡಿದವರ ಶಾಲನ್ನು ಎಳೆದದ್ದು ನ್ಯಾಯವೆಂದು ಹೇಳುವುದಿಲ್ಲ. ಅಂಥ ಅಹಿತಕರ ಘಟನೆ ಇನ್ನು ಮುಂದೆ ವಿಧಾನ ಸಭೆಯಲ್ಲಿ ನಡೆಯಬಾರದು, ಅದಕ್ಕೆ ತಾವು ಅವಕಾಶ ಕೊಡಬಾರದೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ಎಂ. ಎಸ್. ಕೃಷ್ಣನರವರು ಹೇಳಿದರು. ಹೊಸ ಗಾಳಿ ಬೀಸಿದೆ ಎಂದು. ಹಳೇ ಮರದಲ್ಲಿ ಹೊಸ ಗಾಳಿ ಬೀಸಿದೆಯೇ ವಿನಹ ಹೊಸ ಮರದಲ್ಲಿ ಅಲ್ಲ. ನಾಯಕರಾಗಿರತಕ್ಕವರು ಕೂಡ ಕಾಂಗ್ರೆಸ್ಸಿನಲ್ಲಿದ್ದರು. ತಾವು ಕೂಡ ನಮ್ಮ ಜೊತೆಯಲ್ಲಿದ್ದವರು. ಕೆಲವರು ಮಾತನಾಡುವಾಗ, ಕಾಂಗ್ರೆಸ್ ಸರ್ಕಾರ ಬದಲಾಗಿ ನಾವು ಈ ಕಡೆ ಕುಳಿತಿದ್ದೇವೆ, ನೀವು ಆ ಕಡೆ ಕುಳಿತಿದ್ದೀರಿ ಅಂದ ಮಾತ್ರಕ್ಕೆ ಕಾಂಗ್ರೆಸ್ಸೇತರ ಸರ್ಕಾರ ಅಲ್ಲ ಎಂಬ ಮಾತನ್ನು ಹೇಳುವಂತಿಲ್ಲ. ಆ ಕಡೆ ಇರತಕ್ಕ ಬಹುತೇಕ ಜನ ಕಾಂಗ್ರೆಸ್ಸಿನಲ್ಲಿದ್ದವರೇ ಆಗಿದ್ದಾರೆ. ಏನೋ ಬದಲಾವಣೆ ಮಾಡುತ್ತೇವೆಂಬ ಆಶೋತ್ತರವನ್ನು ಕೊಟ್ಟಿದ್ದೀರಿ, ಸಂತೋಷ ಮಾನ್ಯ ಕೃಷ್ಣನ್‌ರವರು ಮಾತನಾಡುತ್ತಾ ಮತ್ತೊಂದು ಮಾತು ಹೇಳಿದರು, ಸರ್ಕಾರವನ್ನು ಉರುಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು. ನಾವೇನು ಉರುಳಿಸುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಅದಾಗಿಯೇ ಉರುಳಿಬಿದ್ದರೆ ಅದಕ್ಕೆ ನಾವು ಜವಾಬ್ದಾರರಲ್ಲ ಎಂದು ಮಾನ್ಯ ಕೃಷ್ಣನ್‌ರವರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಏನೇ ಇರಲಿ, ಇವತ್ತು ನಾವು ಮಲೆನಾಡಿನ ಪ್ರಾಂತದವರಾಗಿ ಬಂದಿರತಕ್ಕದ್ದು ಅದರಲ್ಲಿಯೂ ಕೂಡ ನನ್ನ ಪಕ್ಕದ ಕ್ಷೇತ್ರದವರೇ ಆಗಿರತಕ್ಕದ್ದು ಬಹಳ ಸಂತೋಷವಾಗಿದೆ. ಈ ಮೊದಲು ಅನೇಕರು ಮಾತನಾಡುತ್ತಾ ಹೇಳಿದರು. ಮೊದಲು ಯಾವಾಗಲೂ ಕೂಡ ಆಡಳಿತ ಪಕ್ಷ ಅಂದರೆ ಒಂದೇ ಒಂದು ಪಕ್ಷವಾಗಿರುತ್ತಿತ್ತು ಮತ್ತು ವಿರೋಧ ಪಕ್ಷ ಹಲವಾರು ಪಕ್ಷಗಳಿಂದ ಕೂಡಿರುತ್ತಿತ್ತು ಎಂದು. ಆದರೆ ಈ 7ನೇ ವಿಧಾನ ಸಭೆಯ ವಿಶಿಷ್ಟ ಏನೆಂದರೆ ಆಡಳಿತ ಪಕ್ಷವೇ ಅನೇಕ ಪಕ್ಷಗಳಿಂದ ಕೂಡಿದೆ ಮತ್ತು ವಿರೋಧ ಪಕ್ಷ ಒಂದೇ ಒಂದು ಪಕ್ಷದಿಂದ ಕೂಡಿ ಪ್ರಬಲವಾಗಿದೆ. ತಾವು ನಮಗೆ ಮಾತನಾಡಲು ಅವಕಾಶ ಕೊಡುವಾಗ ಇಂಥಿಂಥ ಪಕ್ಷಗಳಿಗೆ ಇಷ್ಟಿಷ್ಟು ಸಮಯವೆಂದು ವಿಂಗಡಿಸಿ ಕೊಟ್ಟರೆ ನಮ್ಮ ಪಕ್ಷಕ್ಕೆ ಕಾಲಾವಕಾಶ ಕಡಿಮೆಯಾಗುತ್ತದೆ. ಆದ್ದರಿಂದ, ಈ ತಾರತಮ್ಯವನ್ನು ಮಾಡದೆ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎಂಬ ಎರಡೇ ಭಾವನೆಗಳನ್ನು ಇಟ್ಟುಕೊಂಡು ಆ ಕಡೆ ಒಬ್ಬರಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಈ ಕಡೆ ಒಬ್ಬರಿಗೆ ಮಾತನಾಡುವ ಅವಕಾಶ ಕೊಡಬೇಕೆಂದು ಮನವಿ ಮಾಡಿ ಕೊಳ್ಳುತ್ತೇನೆ. ಇವತ್ತು ಅನೇಕರು ಹೊಸದಾಗಿ ವಿಧಾನ ಸಭಾ ಸದಸ್ಯರಾಗಿ ಬಂದಿದ್ದಾರೆ. ಅಂಥವರಿಗೆ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಅವರಿಗೂ ಕೂಡ ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಂಡು

ಈ ಒಂದು ಸಂದರ್ಭದಲ್ಲಿ ನನಗೆ ಮಾತನಾಡಲು ಅವಕಾಶ ಕೊಟ್ಟಂಥ ತಮಗೂ ಮತ್ತು ಎಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ, ತಾವು ಮೊದಲೇ ತಿಳಿಸಿದ ಹಾಗೆ ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ಮುಂದೆ ಮಾತನಾಡುವಾಗ ಹೆಚ್ಚು ಕಾಲಾವಕಾಶ ಕೊಡಬೇಕೆಂದು ಪ್ರಾರ್ಥಿಸಿ ಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಸಿ. ಬೈರೇಗೌಡ (ವೇಮಗಲ್).—ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯ ಅಧ್ಯಕ್ಷರಾಗಿ ತಾವು ಸರ್ವಾನುಮತದಿಂದ ಆಯ್ಕೆಯಾಗಿರುವುದು ನನಗಂತೂ ಬಹಳ ಸಂತೋಷವನ್ನುಂಟು ಮಾಡಿದೆ. ನಾನು ಈ ಸಭೆಗೆ ಪ್ರಪ್ರಥಮವಾಗಿ ಪ್ರವೇಶ ಮಾಡಿದಾಗ ಆಗಿನ ಅಧ್ಯಕ್ಷರಾಗಿದ್ದವರು ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರು ಅವರು ಆ ಸ್ಥಾನದ ತುಂಬಾ ಕುಳಿತಿದ್ದರು. ಆದರೆ ತಾವು ಗಾತ್ರದಲ್ಲಿ ಅವರಷ್ಟಿಲ್ಲದಿದ್ದರೂ ಸಹ ಅವರು ನಮಗೆ ಯಾವರೀತಿ ರಕ್ಷಣೆ ಮತ್ತು ಅವಕಾಶಗಳನ್ನು ಕೊಡುತ್ತಿದ್ದರೋ ಅದೇ ರೀತಿಯಲ್ಲಿ ತಾವೂ ಕೊಡಬೇಕೆಂದು ತಮ್ಮಲ್ಲಿ ವಿನಂತಿಸಿ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರಿಗೂ ಅಷ್ಟೇ ಗಾತ್ರವಾಗುವುದಕ್ಕೆ ಹೇಳಿ. (ನಗು)

ಶ್ರೀ ಸಿ. ಬೈರೇಗೌಡ.—ಹಿಂದೆ ಮಾತನಾಡಿದ ಸದಸ್ಯರು ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಬಗ್ಗೆ ಹೆಚ್ಚಿನ ಮಾತನ್ನು ಆಡಿದ್ದಾರೆ. ನಾನು ಇಡೀ ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯಾದ ಕೋಲಾರ ಜಿಲ್ಲೆಯಿಂದ ಬಂದಿರತಕ್ಕವನು. ಹಿಂದುಳಿದ ಜಿಲ್ಲೆಯಾದ ಕೋಲಾರದ ವಿಷಯ ಬಂದಾಗ ಮತ್ತು ರೈತರ ಸಮಸ್ಯೆ ಬಂದಾಗ ತಾವು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಆರ್. ಯಾವಗಲ್ (ನರಗುಂದ).—ಮಾನ್ಯ ಅಧ್ಯಕ್ಷರೇ. ತಮ್ಮನ್ನು ಹಲವಾರು ವರ್ಷಗಳಿಂದ ನಾನು ಬಲ್ಲೆ. ತಾವು ತಮ್ಮ ವಯಸ್ಸಿಗೆ ಮೀರಿ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿದ್ದೀರಿ. ಅದೇ ರೀತಿ ಈ ಸ್ಥಾನದಲ್ಲೂ ಕೂಡ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತೀರಿ ಎಂಬ ನಂಬಿಕೆ ನನಗಿದೆ. ಈಗಾಗಲೇ ಹಲವಾರು ಯುವಕ ಸದಸ್ಯ ಮಿತ್ರರು ಹೇಳಿದಂತೆ ಹೊಸದಾಗಿ ಸದಸ್ಯರಾಗಿರುವವರಿಗೆ ನೀತಿನಿಯಮಗಳ ಬಗ್ಗೆ ಕಲ್ಪನೆ ಇರುವುದಿಲ್ಲ. ಆದರೆ ನಾವು ಯಾವ ಹಿನ್ನೆಲೆಯಿಂದ, ಯಾವ ಭಾವನೆ ಮತ್ತು ಆಶೋತ್ತರಗಳನ್ನು ಹೊತ್ತು ಇಲ್ಲಿ ಬಂದಿದ್ದೇವೆ ಎಂಬ ಸಂಪೂರ್ಣ ಅರಿವು ತಮಗಿದೆ. ತಮ್ಮ ಮಾರ್ಗದರ್ಶನ ನಮಗೆ ಬೇಕಾಗಿದೆ. ಯುವಕರ ಪ್ರತಿನಿಧಿಗಳಾಗಿ ತಾವು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿರುವುದಕ್ಕಾಗಿ ತಮ್ಮನ್ನು ಅಭಿನಂದಿಸಿ ಮುಂಬರುವ ದಿನಗಳಲ್ಲಿ ಸಭೆಯನ್ನು ಸಮರ್ಥವಾಗಿ ನಡೆಸಿಕೊಂಡು ಹೋಗುತ್ತೀರೆಂದು ಆಶಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ, ಈ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕಾಗಿ ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಜನರ ಆಶೋತ್ತರಗಳನ್ನು ಈಡೇರಿಸಲು ಈ ಸಭೆಯ ಕಾರ್ಯಕಲಾಪಗಳನ್ನು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಲು ತಮಗೆ ಶಕ್ತಿ ಬರಲಿ, ಅದರಿಂದ ಜನರಿಗೆ ಕಲ್ಯಾಣವಾಗಲಿ ಎಂದು ಈ ಸಮಯದಲ್ಲಿ ಹಾರೈಸಿ ತಮ್ಮನ್ನು ಮತ್ತೊಮ್ಮೆ ಅಭಿನಂದಿಸುತ್ತೇನೆ.

ಶ್ರೀ ಹನುಮಂತರಾವ್ ದೇಸಾಯಿ (ಅಫ್ಜಲ್‌ಪುರ).—ಸನ್ಮಾನ್ಯ ಅಧ್ಯಕ್ಷರೆ, ತಾವು ಅವಿರೋಧವಾಗಿ ಸರ್ವಾನುಮತದಿಂದ ಅಧ್ಯಕ್ಷರಾಗಿ ಚುನಾಯಿತರಾಗುವುದಕ್ಕೆ ಹಿರಿಯ ಸದಸ್ಯರು ಮತ್ತು ಕಿರಿಯ ಸದಸ್ಯರುಗಳು ತಮಗೆ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ನಾನೂ ಕೂಡ ಈ ಸಂದರ್ಭದಲ್ಲಿ ಮಾತನಾಡಲೇಬೇಕು ಎಂದು ವಿಚಾರ ಮಾಡಿರಲಿಲ್ಲ. ಆದರೆ ಎಲ್ಲರೂ ಕೂಡ ತಮ್ಮ ತಮ್ಮ ಜಿಲ್ಲೆಯ ಹೆಸರು ಹೇಳಿ ಅಭಿನಂದನೆಗಳನ್ನು ಸಲ್ಲಿಸಿರುವಾಗ ನಾವು ಮಾತನಾಡದಿದ್ದರೆ ಗುಲ್ಬರ್ಗ ಬೀದರ್ ಜಿಲ್ಲೆಯವರಿಗೆ ಅಸಮಾಧಾನವಾಗಿದೆಯೆಂಬ ಅಭಿಪ್ರಾಯ ಬಂದೀತು ಎಂದು ತಿಳಿದುಕೊಂಡು ಆ ರೀತಿ ಅಭಿಪ್ರಾಯ ಇಟ್ಟುಕೊಳ್ಳಬಾರದು, ಹೈದರಾಬಾದ್ ಕರ್ನಾಟಕದವರಿಗೆ ಕೂಡ ತಮ್ಮ ಆಯ್ಕೆಯಿಂದ ಬಹಳ ಸಂತೋಷವಾಗಿದೆ ಎಂಬ ಮಾತನ್ನು ಹೇಳಲು ನಾನು ನಿಂತಿದ್ದೇನೆ. ತಾವು ಆ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕಿಂತ ಬೇರೆ ಸ್ಥಾನದಲ್ಲಿ ಇದ್ದು ಮಾರ್ಗದರ್ಶನ ಮಾಡಿದ್ದರೆ ಚೆನ್ನಾಗಿತ್ತು ಎಂಬ ಮನೋಭಾವನೆ ಪ್ರತಿಯೊಬ್ಬ ತರುಣರಲ್ಲೂ ಇದೆ. ಆದರೂ ಮಹತ್ವಪೂರಿತವಾದ ಜವಾಬ್ದಾರಿ ತಮ್ಮ

ಮೇಲೆ ಹೊರಿಸಿರುವುದರಿಂದ ನಮಗೆ ಸಂತೋಷವಾಗಿದೆ. ಅನೇಕ ಜನರು ಎರಡು ಮೂರು ಬಾರಿ ವಿಧಾನಸಭೆಗೆ ಆಯ್ಕೆಯಾಗಿದ್ದು ತಮ್ಮ ಅನುಭವಗಳನ್ನು ಹೇಳಿದ್ದಾರೆ. ಆದರೆ ನಾವು ಮೊಟ್ಟಮೊದಲನೆಯ ಸಲ ಶಾಸಕರಾಗಿ ಬಂದಿದ್ದೇವೆ. ನಮಗೆ ಅನುಭವವಿಲ್ಲ. ರೀತಿ ನೀತಿ ನಿಯಮಗಳು ನಮಗೆ ಅಷ್ಟಾಗಿ ಗೊತ್ತಿಲ್ಲದೇ ಇರುವುದರಿಂದ ತಾವು ನಮಗೆ ಸರಿಯಾಗಿ ಮಾರ್ಗದರ್ಶನ ಮಾಡುತ್ತೀರಿ ಎಂದು ನಂಬಿದ್ದೇವೆ. ತಾವು ವಯಸ್ಸಿನಲ್ಲಿ ಚಿಕ್ಕವರಿದ್ದರೂ ಕೂಡ ಅನುಭವದಲ್ಲಿ ಹಿರಿಯರಾಗಿದ್ದೀರಿ. ಈ ಬಗ್ಗೆ ಸಂಶಯ ಬೇಡ. ಆದ್ದರಿಂದ ತಾವು ತಮ್ಮ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತೀರಿ ಎಂಬ ವಿಶ್ವಾಸವನ್ನಿಟ್ಟುಕೊಂಡು ತಮ್ಮನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಋಣಿಯಾಗಿದ್ದೇನೆ.

ಶ್ರೀ ರಾಮಚಂದ್ರ ವೀರಪ್ಪ (ಹುಲ್ಸೂರು).—ಮಾನ್ಯ ಅಧ್ಯಕ್ಷರೇ, ತಾವು ಅಧ್ಯಕ್ಷರಾಗಿ ಆಯ್ಕೆಯಾಗಿರುವುದಕ್ಕೆ ಕೋಟಿ ಕೋಟಿ ಧನ್ಯವಾದಗಳು. ನಾನು ಎರಡು ವಿಷಯಗಳನ್ನು ಹೇಳಬೇಕಾಗಿದೆ. ನಮ್ಮ ಭಾಗದಲ್ಲಿ ನೀರಾವರಿ ಅನುಕೂಲ ಯಾವುದೂ ಇಲ್ಲ. ಬಾವಿಯಿಂದಲೇ ನಾವು ವ್ಯವಸಾಯ ಮಾಡಬೇಕಾಗಿದೆ. ಜೊತೆಗೆ ವಿದ್ಯುತ್ ಸಮಸ್ಯೆ ಬೇರೆ ಇದೆ. ಇದರಿಂದ ದಿವಸ ಮೋಟಾರ್ ನಿಂತು ಹೋಗುತ್ತದೆ.

ಅಧ್ಯಕ್ಷರು.—ಇದನ್ನೆಲ್ಲಾ ಮುಂದೆ ಮಾತನಾಡಿ.

ಶ್ರೀ ರಾಮಚಂದ್ರ ವೀರಪ್ಪ.—ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಆದ್ದರಿಂದ ಹೇಳುತ್ತಿದ್ದೇನೆ. ಮತ್ತೆ ಅವರು ಸಿಗುತ್ತಾರೋ ಇಲ್ಲವೋ.

ಅಧ್ಯಕ್ಷರು.—ದಯಮಾಡಿ ಇವತ್ತಿನ ವಿಷಯಕ್ಕೆ ಸೀಮಿತಮಾಡಿ ಮಾತನಾಡಿದರೆ ಒಳ್ಳೆಯದು.

ಶ್ರೀ ರಾಮಚಂದ್ರ ವೀರಪ್ಪ.—ತಾವು ಅಧ್ಯಕ್ಷರಾಗಿ ಆರಿಸಿಬಂದಿರುವುದು ಬಹಳ ಸಂತೋಷ. ತಮ್ಮ ವಯಸ್ಸು ಸಣ್ಣದಿದ್ದರೂ ಕೂಡ ಜವಾಬ್ದಾರಿ ಬಹಳ ದೊಡ್ಡದಾಗಿದೆ. ಇದನ್ನು ತಾವು ಉಳಿಸಿಕೊಳ್ಳಬೇಕು. ತಾವು ಈ ಜವಾಬ್ದಾರಿಯನ್ನು ನಿರ್ವಹಿಸುತ್ತೀರೆಂಬ ಭರವಸೆ ನಮಗಿದೆ. ಆ ಕಡೆಯವರು ಈ ಕಡೆಯವರು ಎಂಬ ಭೇದಭಾವನೆಯಿಲ್ಲದೆ ಕಾರ್ಯಕಲಾಪಗಳನ್ನು ನಡೆಸಿಕೊಂಡು ಹೋಗುತ್ತೀರಿ ಎಂಬ ನಂಬಿಕೆ ನಮಗೆಲ್ಲಾ ಇದೆ. ದೇವರು ತಮಗೆ ಆಯಸ್ಸು, ಆರೋಗ್ಯವನ್ನು ಕೊಡಲಿ, ಐದು ವರ್ಷಗಳ ಕಾಲ ಪೂರ್ತಿ ತಾವು ಅಲ್ಲಿ ಸೇವೆ ಮಾಡುವಂಥ ಅವಕಾಶ ಸಿಗಲಿ ಎಂದು ಹಾರೈಸಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ಚಾಮುಂಡೇಶ್ವರಿ).—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿಧಾನಸಭೆಯಲ್ಲಿ ಲೋಕದಳ ಪಕ್ಷದಿಂದ ಏಕೈಕ ಅಭ್ಯರ್ಥಿಯಾಗಿ ನಾನು ಪಾದಾರ್ಪಣೆ ಮಾಡಿದ್ದೇನೆ. ಕರ್ನಾಟಕದ ೭ನೇ ವಿಧಾನಸಭೆಗೆ ಕರ್ನಾಟಕ ಜನತೆ ಬದಲಾವಣೆಯನ್ನು ತಂದಿದ್ದಾರೆ. ಅದೇ ರೀತಿ ಸಾಮಾನ್ಯವಾಗಿ ವಯಸ್ಸಾದವರು ಅಲಂಕರಿಸುತ್ತಿದ್ದ ಅಧ್ಯಕ್ಷ ಪೀಠಕ್ಕೆ ಯುವಕರನ್ನು ಆಯ್ಕೆ ಮಾಡಿದ್ದಾರೆ. ಆದ್ದರಿಂದ ನನಗೆ ಅತ್ಯಂತ ಸಂತೋಷವಾಗಿದ್ದು ನಮ್ಮ ಪಕ್ಷದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ. ಇವತ್ತು ವಿಧಾನಸಭೆಗೆ ಅನೇಕ ಯುವಕರು ಹೊಸದಾಗಿ ಸದಸ್ಯರಾಗಿ ಬಂದಿದ್ದಾರೆ. ಆದ್ದರಿಂದ ಅವರಿಗೆ ಹೆಚ್ಚಿನ ಅವಕಾಶ ಕೊಡಬೇಕೆಂದು ಅನೇಕ ಸದಸ್ಯರು ಹೇಳಿದ್ದಾರೆ. ನಾನು ಲೋಕದಳ ಪಕ್ಷದ ಏಕೈಕ ಸದಸ್ಯನಾಗಿರುವುದಲ್ಲದೆ ಅತ್ಯಂತ ಅಲ್ಪಸಂಖ್ಯಾತನಾಗಿದ್ದು ಜನತಾ ಸರ್ಕಾರಕ್ಕೆ ಬೆಂಬಲ ಸೂಚಿಸುವವನಾಗಿದ್ದೇನೆ. ಚರ್ಚೆ ಮಾಡತಕ್ಕ ಸಮಯ ಬಂದಾಗ ಯುವಕರಿಗೆ ಮತ್ತು ಹೊಸದಾಗಿ ಸದಸ್ಯರಾಗಿ ಬಂದಿರುವವರಿಗೆ ಹೆಚ್ಚಿನ ಅವಕಾಶ ಕೊಡಬೇಕಾಗುತ್ತದೆ ಎಂಬ ಮನವಿ ಮಾಡುತ್ತಾ ತಾವು ಏನು ಸಭಾಧ್ಯಕ್ಷ ಪೀಠವನ್ನಲಂಕರಿಸಿದ್ದೀರಿ ಅದರಲ್ಲಿ ತಮಗೆ ಯಶಸ್ಸು ದೊರಕಲಿ ಎಂದು ಹಾರೈಸಿ ಮತ್ತೊಮ್ಮೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ,

ಶ್ರೀ ಭಕ್ತವತ್ಸಲಂ (ಕೆ.ಜಿ.ಎಫ್).—ಮಾನ್ಯ ಅಧ್ಯಕ್ಷರೇ, ತಾವು ಸಭಾಪತಿಯಾಗಿ ಆಯ್ಕೆಯಾಗಿರುವುದು ನಮಗೆ ಹೆಮ್ಮೆಯಾಗಿದೆ. ನಾನು ನನ್ನ ಪಕ್ಷದ ಪರವಾಗಿ ತಮ್ಮನ್ನು ಸ್ವಾಗತ ಮಾಡಿ ನನ್ನ ಬೆಂಬಲವನ್ನು ತಮಗೆ ಕೊಡುತ್ತೇನೆ. ಕನ್ನಡ ಭಾಷೆಗೆ ನಾನು ವಿರೋಧವಾಗಿಲ್ಲ. ಕನ್ನಡ ಕಸ್ತೂರಿ. ಅದು ಬಾಳಲಿ. ಜೈ ಕರ್ನಾಟಕ.

ಅಧ್ಯಕ್ಷರು.—ಅತ್ಯಂತ ಶ್ರೇಷ್ಠವೂ ಪವಿತ್ರವೂ ಆದಂತಹ ವಿಧಾನಸಭಾಧ್ಯಕ್ಷ ಸ್ಥಾನಕ್ಕೆ ತುಂಬು ವಿಶ್ವಾಸದಿಂದ ನನ್ನನ್ನು ಆರಿಸಿ ತಾವು ಇಟ್ಟಿರತಕ್ಕ ನಂಬಿಕೆ, ಪ್ರೇಮ, ಆದರ, ವಿಶ್ವಾಸಗಳನ್ನು ವ್ಯಕ್ತ ಮಾಡಿದ್ದೀರಿ. ಇದಕ್ಕೆ ಕೃತಜ್ಞತೆ ಹೇಳುವುದು ನನ್ನ ಕರ್ತವ್ಯವಾದರೂ ಹೇಳುವುದಕ್ಕೆ ನನ್ನಲ್ಲಿ ನುಡಿಗಟ್ಟುಗಳು ಉಳಿದಿಲ್ಲ. ನನ್ನ ದೃಷ್ಟಿಯಲ್ಲಿ, ಜೀವನದ ಅತ್ಯಂತ ಸಂಧಿಗ್ಧ ಕಾಲದಲ್ಲಿ ಈ ಸ್ಥಾನವನ್ನು ನನ್ನ ಹೆಗಲಮೇಲೆ ತಾವು ಹಾಕಿದ್ದೀರಿ. ತಾವು ಹಾಕಿರತಕ್ಕ ಮತ್ತು ಇಟ್ಟಿರತಕ್ಕಂತಹ ನಂಬಿಕೆಗಾಗಿ ನಾನು ಋಣಿಯಾಗಿದ್ದೇನೆ. ಅದಕ್ಕೆ ತಕ್ಕಂತೆ ನಡೆದುಕೊಳ್ಳತಕ್ಕ ಪಣ ನನ್ನದು. ಸಂಸದೀಯ ಇತಿಹಾಸದಲ್ಲಿ ಘನವೆತ್ತ ಮಹಾಮಹಿಮರು, ಧೀಮಂತ ನಾಯಕರುಗಳು, ಅತ್ಯಂತ ಮೇಧಾವಿಗಳು ಈ ಪೀಠವನ್ನು ಅಲಂಕರಿಸಿದ್ದಾರೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಸ್ವಲ್ಪ ಪೂರ್ವಭಾವಿಯಾಗಿ ಕೇಂದ್ರದ ಶಾಸನಸಭೆಯ ಮೊಟ್ಟಮೊದಲನೆಯ ಭಾರತೀಯ ಅಧ್ಯಕ್ಷರಾಗಿದ್ದ ಶ್ರೀ ವಿಠಲ್ ಭಾಯ್ ಪಟೇಲ್‌ರ ಒಂದು ಉಜ್ವಲ ಉದಾಹರಣೆಯನ್ನು ಇಂತಹ ಸಮಯದಲ್ಲಿ ನೆನೆಸಿಕೊಳ್ಳುವುದು ಒಂದು ಸ್ಫೂರ್ತಿದಾಯಕವಾದ ವಿಚಾರ. ಅವರ ತರುವಾಯ ಸ್ವತಂತ್ರ ಭಾರತದಲ್ಲಿ ಅನೇಕ ಮಹಾಮಹಿಮರು ಅಧ್ಯಕ್ಷ ಸ್ಥಾನವನ್ನು ಅತ್ಯಂತ ಗೌರವಾಸ್ಪದ ರೀತಿಯಲ್ಲಿ ನಿರ್ವಹಿಸಿ ತಮ್ಮ ಸಮರ್ಥನೀಯ ಕಾಣಿಕೆಯನ್ನು ನೀಡಿದ್ದಾರೆ. ಕರ್ನಾಟಕ ಇತಿಹಾಸವನ್ನು ತೆಗೆದುಕೊಂಡು ಅವಲೋಕಿಸುವುದಾದರೆ ದಿವಂಗತ ಸರ್ವಶ್ರೀ ಸಿದ್ಧಯ್ಯನವರು, ವೈಕುಂಠ ಬಾಳಿಗಾರವರು, ಎಸ್. ಆರ್. ಕಂಠಿಯವರು ಸಭಾಧ್ಯಕ್ಷ ಸ್ಥಾನವನ್ನು ನಿರ್ವಹಿಸಿದ್ದರೆ, ದಿವಂಗತ ಕೆ. ಟಿ. ಭಾಷ್ಯಂರವರಂತಹ ಮತ್ತು ಟಿ. ಸುಬ್ರಹ್ಮಣ್ಯಂರಂತಹ ಮೇಧಾವಿಗಳು ಚರಿತ್ರಾರ್ಹವಾದ ಪರಂಪರೆಯನ್ನು ಈ ರಾಜ್ಯದ ಶಾಸನಸಭೆಗೆ ನಿರ್ಮಿಸಿ ಬಿಟ್ಟುಹೋಗಿದ್ದಾರೆ. ಇವರೆಲ್ಲರೂ ಮೆರೆಸಿದಂತಹ ಸಂಸದೀಯ ಘನತೆಯ ವಿನಮ್ರ ವಾರಸುದಾರನಾಗಿ ತಮ್ಮ ಕೃಪೆಯಿಂದ ನಾನು ಇಲ್ಲಿ ಕುಳಿತಿದ್ದೇನೆ. ಹೊಸದಾಗಿ ರಾಜ್ಯದ ಏಳನೇ ವಿಧಾನಸಭೆಯಲ್ಲಿ ಆರಿಸಿ ಬಂದಿರತಕ್ಕ ಎಲ್ಲ ಸನ್ಮಾನ್ಯ ಸದಸ್ಯರಿಗೂ ಕೃತಜ್ಞತಾಪೂರ್ವಕ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ಕರ್ನಾಟಕ ಜನಸ್ತೋಮ ಈ ಬಾರಿ ಪರಿವರ್ತನೆಯ ಚಕ್ರವನ್ನು ತಿರುಗಿಸಿ ಹೊಸ ಹೊಣೆಗಾರಿಕೆಯನ್ನು ನಮ್ಮೆಲ್ಲರ ಮೇಲೆ ಹೊರಿಸಿದೆ. ಪ್ರಚಂಡ ಆಶೋತ್ತರಗಳ ಸಂಕೇತವಾಗಿ ನಾವೆಲ್ಲರೂ ಇಲ್ಲಿ ಕುಳಿತಿದ್ದೇವೆ. ಈ ಅಖಂಡ ವಿಶ್ವಾಸಕ್ಕೆ ನಮ್ರರಾಗಿ ನಾವೆಲ್ಲರೂ ನಡೆದುಕೊಳ್ಳೋಣ. ಜನತಂತ್ರ ಎಂದರೆ ಚರ್ಚೆ. ಚರ್ಚೆಯಿಂದ ರಾಜ್ಯಭಾರ ಆಗುತ್ತದೆ ; ವಿವಾದಗಳು ಏಳುತ್ತವೆ ; ಭಿನ್ನಾಭಿಪ್ರಾಯಗಳು ಮೂಡುತ್ತವೆ ; ಸಮಸ್ಯೆಗಳು ಜಟಿಲವಾಗುತ್ತವೆ. ಆದರೆ ಈ ಎಲ್ಲಾ ಭಿನ್ನಾಭಿಪ್ರಾಯಗಳು, ಜಟಿಲತೆಗಳು, ಸಮಸ್ಯೆಗಳು ಜನತಂತ್ರದ ಜೀವಾಳವೆಂದುಕೊಂಡಿದ್ದೇವೆ. ಆದರೆ ಅವುಗಳನ್ನು ಅತ್ಯಂತ ಸಭ್ಯ ರೀತಿಯಲ್ಲಿ ಸರಿಪಡಿಸಿಕೊಳ್ಳುವುದು ಸಂಸದೀಯ ವ್ಯವಹಾರದ ವೈಶಿಷ್ಟ್ಯ. ಸಭಾಧ್ಯಕ್ಷ ಸ್ಥಾನ ನ್ಯಾಯಮೂರ್ತಿಯ ಪೀಠ. ಇದರ ಪರಿವೆ ನನಗಿದೆ. ಕಳೆದ ಹತ್ತಾರು ವರ್ಷಗಳ ನನ್ನ ಸಂಸದೀಯ ಅನುಭವದಲ್ಲಿ ಹಲವು ಪಾತ್ರಗಳನ್ನು ನಾನು ನಿರ್ವಹಿಸಿದ್ದೇನೆ. ಈ ಎಲ್ಲಾ ಪಾತ್ರಗಳ ಅನುಭವದ ಆಧಾರದ ಮೇಲೆ ಮತ್ತೊಂದು ಗುರುತರವಾದ ಪಾತ್ರಕ್ಕೆ ಈಗ ನಾನು ಅಣಿಯಾಗುತ್ತಿದ್ದೇನೆ. ಈ ಕೆಲಸದಲ್ಲಿ ನನ್ನೊಡನೆ ಸಹಕರಿಸಲು ಈ ಎರಡು ಪಾರ್ಶ್ವದ ಸದಸ್ಯರಿಗೆ ನಾನು ಭಿನ್ನವಿಸಿಕೊಳ್ಳುತ್ತಿದ್ದೇನೆ. ನಿಮ್ಮ ಸಹಕಾರ ಇದ್ದರೆ ಮಾತ್ರ ನನ್ನ ಈ ಕೆಲಸ ಯಶಸ್ವಿಯಾಗುವುದಕ್ಕೆ ಸಾಧ್ಯ. ಈ ಶುಭ ಸಂದರ್ಭದಲ್ಲಿ ತಮ್ಮಲ್ಲಿ ನನ್ನ ಒಂದು ವಚನ ನೀಡುತ್ತೇನೆ. ಪ್ರತಿ ಪಕ್ಷದ ನಾಯಕರು ನ್ಯಾಯ ತಕ್ಕಡಿಯನ್ನು ಪ್ರಸ್ತಾಪ ಮಾಡಿದ್ದಾರೆ. ಈ ನ್ಯಾಯ ತಕ್ಕಡಿಯನ್ನು ನಾನು ಸಮಾನವಾಗಿ ಎತ್ತಿಹಿಡಿಯುತ್ತೇನೆಂಬ ಪ್ರತಿಜ್ಞೆಯನ್ನು ತಮ್ಮ ಮುಂದೆ ಸಮರ್ಪಿಸುತ್ತಿದ್ದೇನೆ.

ನಿಯಮ ನಿಬಂಧನೆಗಳಿಗೆ ಒಳಗಾಗಿ ಚರ್ಚೆಗೆ, ಅಭಿಪ್ರಾಯ ಪ್ರತಿಪಾದನೆಗೆ ಮುಕ್ತವಾದ ಅವಕಾಶ ಉಂಟು. ಸದಸ್ಯರ ಹಕ್ಕುಗಳನ್ನು ಎತ್ತಿಹಿಡಿಯುವುದರಲ್ಲಿ ನಾನೆಂದೂ ಹಿಂದೆ ಬಿದ್ದವನಲ್ಲ, ಬೀಳುವವನೂ ಅಲ್ಲ. ಅಂತೆಯೇ ಸದನದ ಘನತೆಯನ್ನು ತ್ರಿಕರಣಪೂರ್ವಕವಾಗಿ ಪ್ರತಿಷ್ಠಾಪಿಸಲು ನಾನು ಪಣತೊಟ್ಟಿದ್ದೇನೆ ; ಅದನ್ನು ಕರ್ತವ್ಯವನ್ನಾಗಿಸಿಕೊಂಡಿದ್ದೇನೆ. ನಾವೆಲ್ಲರೂ ಕರ್ನಾಟಕ ಜಾನಪದದ ಹಿತದ ಕಾವಲುಗಾರರು. ನಮ್ಮನ್ನು ನಂಬಿ ಅವರು ನಮ್ಮನ್ನಿಲ್ಲಿಗೆ ಕಳುಹಿಸಿದ್ದಾರೆ. ಆ ನಂಬಿಕೆಗೆ ಎರವಾಗದಿರೋಣ. ಹಿರಿಯರು ಹಾಕಿರುವ ಪರಂಪರೆಯನ್ನು ಮರೆಯದೆ ಅದನ್ನು ಬಳಸಿ, ಬೆಳೆಸಿ ಅಭಿವೃದ್ಧಿಪಡಿಸಿಕೊಂಡು ಹೋಗೋಣ. ಹೊಸ ದಿಗಂತದ ಕಡೆಗೆ ದಿಟ್ಟ ಹೆಜ್ಜೆಯಿಡೋಣ. ಜನತಂತ್ರ ವ್ಯವಸ್ಥೆಯನ್ನು ಅರ್ಥಪೂರ್ಣಗೊಳಿಸೋಣ. ನನ್ನನ್ನು ಅಭಿನಂದಿಸಿ ಮಾತನಾಡಿದ ಸದಸ್ಯರಿಗೆ ನಾನು ತುಂಬ ಅಭಾರಿಯಾಗಿದ್ದೇನೆ. ಅವರಿಗೆ ಅನಂತ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಇಷ್ಟೊಂದು ದೊಡ್ಡದಾದ ಅಭಿನಂದನೆಗೆ ಉತ್ತರ ಮುಂದೆ ನನ್ನ ನಡುವಳಿಕೆಯಿಂದ ಪ್ರತಿಧ್ವನಿಯಾಗಬೇಕೇ ಹೊರತು ನನ್ನ ಭಾಷೆ

ಯಿಂದಲ್ಲ. ಆದುದರಿಂದ ನಿಮ್ಮ ಈ ಭಾವನೆಗಳನ್ನು ಭಾಷೆಯ ಕಟ್ಟುಪಾಡಿಗೆ ಒಳಪಡಿಸದೇ ಈ ಸ್ಥಾನದ ಮೂಲಕ ನಿಮ್ಮೆಲ್ಲರಿಗೆ ಸಮಾಧಾನವಾಗುವ ಹಾಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ದಿಸೆಯಲ್ಲಿ ತಮ್ಮ ಸಂಪೂರ್ಣ ಸಹಾಯ ಸಹಕಾರವನ್ನು ನಾನು ಈ ಮೂಲಕ ಕೇಳುತ್ತಿದ್ದೇನೆ. ಬಹುಶಃ ಶಾಸನಸಭೆಯಲ್ಲಿ ಅದರಲ್ಲೂ ವಿಶೇಷವಾಗಿ ಮೇಲ್ಮನೆಯಲ್ಲಿ ಹೆಚ್ಚು ಮಾತನಾಡಿದ ಒಂದು ಫಲವಾಗಿ ಈಗ ಇಲ್ಲಿ ನನಗೆ ಈ ದಿನ ನನ್ನ ಮಾತಿಗೆ ಮೂಗುದಾರ ಹಾಕತಕ್ಕ ರೀತಿಯ ಒಂದು ಕಾರ್ಯವೂ ಇದು ಇರಬಹುದು. ಅದು ಏನೇ ಇದ್ದರೂ ಈ ಹಿತ ಮಿತ ವ್ಯವಸ್ಥೆಯೊಳಗೆ ಕೆಲಸ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ. ಈ ವಿಷಯದಲ್ಲಿ ತಮ್ಮೆಲ್ಲರ ಸಹಕಾರವನ್ನು ಮತ್ತೊಮ್ಮೆ ಕೋರಿ ಈ ಸಭೆಯನ್ನು ಮುಂದೂಡುವ ಮುನ್ನ ಅತ್ಯಂತ ವಿಶೇಷವಾದ ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದಿದ್ದೇನೆ. ಕರ್ನಾಟಕ ಶಾಸಕಾಂಗ ಕಾಂಗ್ರೆಸ್-ಐ ಪಕ್ಷದ ನಾಯಕರಾಗಿ ಚುನಾಯಿಸಲ್ಪಟ್ಟಿರತಕ್ಕ ಶ್ರೀಮಾನ್ ವೀರಪ್ಪ ಮೊಯ್ಲಿಯವರಿಂದ ಪತ್ರ ಬಂದಿದೆ. ಈ ಸದನದಲ್ಲಿ ಕಾಂಗ್ರೆಸ್-ಐ ಪಕ್ಷವು ೮೧ ಸದಸ್ಯರ ಸಂಖ್ಯಾಬಲವನ್ನು ಹೊಂದಿದೆ. ಆದುದರಿಂದ ಸದನದಲ್ಲಿ ಕಾಂಗ್ರೆಸ್-ಐ ಪಕ್ಷವನ್ನು ವಿರೋಧಿ ಪಕ್ಷವೆಂದೂ ಶ್ರೀಮಾನ್ ವೀರಪ್ಪ ಮೊಯ್ಲಿಯವರನ್ನು ವಿರೋಧಿ ಪಕ್ಷದ ನಾಯಕರೆಂದೂ ಈ ತಕ್ಷಣದಿಂದಲೇ ಮಾನ್ಯ ಮಾಡಿದ್ದೇನೆ. ಈ ದಿವಸ ಐದು ಗಂಟೆಗೆ ಜಂಟೀ ಅಧಿವೇಶನ ಸೇರುತ್ತದೆ. ಜಂಟೀ ಅಧಿವೇಶನ ಸೇರುವವರೆವಿಗೂ ಈ ಸಭೆಯನ್ನು ಮುಂದೂಡಲಾಗಿದೆ.

ಸಭೆಯು ಮೂರು ಘಂಟೆ ಇಪ್ಪತ್ತೈದು ನಿಮಿಷಗಳಿಗೆ ಮುಕ್ತಾಯವಾಗಿ ಪುನಃ ಜಂಟೀ ಅಧಿವೇಶನಕ್ಕಾಗಿ ಐದು ಘಂಟೆಗೆ ಸೇರಲು ನಿಶ್ಚಯಿಸಿತು,

KARNATAKA LEGISLATURE SECRETARIAT

Address by Sri Govind Narain, Governor of Karnataka, to the Karnataka Legislative Assembly and the Karnataka Legislative Council, assembled together at the Assembly Chamber, Vidhana Soudha, at Five of the Clock.

Monday, the 24th January, 1983

(Magha 4, 1904 Saka)

The Governor arrived at the portico near the Northern entrance to the Vidhana Soudha at Fifty Five Minutes past Five of the Clock On alighting from his car, the Governor was received by Hon'ble Speaker, Hon'ble Chairman and the Secretary, Karnataka Legislature. The Governor was led to the lift on the northern wing. On emerging from the lift, on the first floor, a procession was formed in the following order :

SECRETARY

Hon'ble Speaker Hon'ble Chairman

THE GOVERNOR

(Aid-de-camp)